UNIVERSAL LIBRARY
OU_198624
UNIVERSAL LIBRARY

**OSMANIA UNIVERSITY LIBRARY**

Call No. K915.4 K46N Accession No. K 84

Author [illegible]

Title [illegible]

This book should be returned on or before the dat
d below.

ಚಿತ್ರಮಯ

# ನನ್ನ ಹಿಮಾಲಯ ಯಾತ್ರೆ

ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ.

ಕರ್ನಾಟಕ ಶಿಕ್ಷಣ ಸಮಿತಿಯ ೧೧ನೆಯ ಗ್ರಂಥ.

ಚಿತ್ರಮಯ

# ನನ್ನ ಹಿಮಾಲಯಯಾತ್ರೆ

ಲೇಖಕರು:— ಶ್ರೀ. ಕೃಷ್ಣ ಗೋಸಾವಿ ಭಾರತಸಂಚಾರಿ

ಪ್ರಕಾಶಕರು:— ಶ್ರೀ. ಸು. ಶಿ. ದೇಸಾಯಿ ಎಂ. ಎ.

ಕಾರ್ಯದರ್ಶಿ ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ

೧೯೩೭

(ಎಲ್ಲ ಹಕ್ಕುಗಳೂ ಸಮಿತಿಯವು)

ಬೆಲೆ ೧ ರೂಪಾಯಿ.

ಮುದ್ರಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ
ಮುದ್ರಾಲಯ:- ವಿಜಯ ಮುದ್ರಾಲಯ ಧಾರವಾಡ
ಪ್ರಕಾಶಕರು:- ಶ್ರೀ. ಸು. ಶಿ. ದೇಸಾಯಿ ಎಂ. ಎ.
ಕಾರ್ಯದರ್ಶಿ, ಕರ್ನಾಟಕ ಶಿಕ್ಷಣ ಸಮಿತಿ ಧಾರವಾಡ

# ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| ೧. ಆತ್ಮಿಕ ಕ್ಷುಧೆಯೂ ಹಿಮಗಿರೀಂದ್ರನ ಆಶ್ರಮದಲ್ಲಿ ಹೊಂದಿದ ಶಾಂತಿಲಾಭವೂ | ೧ |
| ೨. ಹಿಮಾಲಯದ ವರ್ಣನೆ ಮತ್ತು ಯಾತ್ರಿಕರು ಮಾಡಬೇಕಾದ ಸಿದ್ಧತೆ | ೮ |
| ೩. ಬದರೀ ಕೇದಾರ ಯಾತ್ರೆಯು | ೧೧ |
| ೪. ಗಂಗೋತ್ರಿ ಜಮ್ನೋತ್ರಿಗಳ ಯಾತ್ರೆ | ೪೧ |
| ೫. ಕಾಶ್ಮೀರ ಯಾತ್ರೆಯು | ೫೩ |
| ೬. ಸಿಮ್ಲಾ ದಾರ್ಜಿಲಿಂಗ ಶಿಲೋಂಗಗಳ ಪ್ರವಾಸ | ೮೭ |
| ೭. ಕೈಲಾಸಯಾತ್ರೆ | ೯೪ |
| ೮. ನೇಪಾಳಯಾತ್ರೆ | ೧೧೦ |

# ತಿದ್ದುಪಡಿ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೮ | ೨೧ | ಲಕ್ಷ್ಮಣಝೂಲಾ | ಲಕ್ಷ್ಮಣಝೊಲಾ |
| ೧೧ | ೨೦ | ಬದರಿ ಇದು ಕೇದಾರ | ಇದು ಬದರಿ ಕೇದಾರ |
| ೧೩ | ೧ | ಸಿದ್ಧವಿದ್ದ | ಪ್ರಸಿದ್ಧವಿದ್ದ |
| ೧೬ | ೧೨ | ಇಧಕ್ಕೆ ಮಹಾವಿದ್ಯಾಲಯ | ಇಲ್ಲಿ ಮಹಾವಿದ್ಯಾಲಯ |
| ೧೬ | ೧೪ | ಆಶ್ರಮ | ಸ್ಥಳ |
| ೧೬ | ೨೦ | ಮುನಿಕಿಕೀಲಿ | ಮುನೀಕಿರೇತಿ |
| ೧೭ | ೧ | ಸ್ರಿಂಗಿನಿಂದ | ಸ್ರಿಂಗಿನಂತೆ |
| ೧೯ | ೨೦ | ಮಾಲೋಚಟ್ಟಿ | ಸೇಮಾಲೊಚಟ್ಟಿ |
| ೧೯ | ೨೬ | ಇಲ್ಲಿ ಎಲ್ಲ | ಇಲ್ಲಿ ಎರಡು |
| ೨೦ | ೯ | ಪಾಂಡ ಚಟ್ಟಿ | ಸೌಂಡ ಚಟ್ಟಿ |
| ೨೦ | ೨೨ | ನೈತಾಳಶಿಲಾ | ವೈತಾಳ ಶಿಲಾ |
| ೨೦ | ೨೩ | ಪಂಡಾರ | ಪಂಡಾ |
| ೨೨ | ೨೦ | ಮದ್ರನಾಥ | ರುದ್ರನಾಥ |
| ೨೪ | ೧೦ | ಚಪೋಲಿ | ಚಮೋಲಿ |
| ೨೪ | ೧೭ | ಕಂಬರಿ | ಶಾಕಂಬರಿ |
| ೩೦ | ೬ | ಪೋಥಿಬಾ | ಪೋಥಿವಾಸಾ |
| ೩೨ | ೨೪ | ಚಪೋಲಿ (ಸಣ ಅಕ್ಷರ) | ಚಮೋಲಿ |
| ೩೬ | ೧೮ | ರಾವಣ | ರಾವಳ |
| ೩೭ | ೧೧ | ಗನಮೀ ಚಟ್ಟಿ | ಗಣಯಿಚಟ್ಟಿ |
| ,, | ,, | ಗನಮೊ (ಸಣ್ಣ ಅಕ್ಷರ) | ಗಣಯಿ |
| ೩೮ | ೧೮ | ದ್ವಾರಹಾಟದಲ | ರಾಣೀಖೇತಿನಲ್ಲಿ |
| ೩೬ | ೧೯ | ರಾಮನಗರಕ್ಕೆ | ರಾಣೀಖೇತಿಗೆ |
| ೪೫ | ೧೬ | ಬರಸಾಲಿ | ಖರಸಾಲಿ |
| ೪೮ | ೬ | ಬೋಹಾರೀನಾಗ | ಲೋಹಾರೀನಾಗ |
| ೪೮ | ೧೨ | ‘ಸೂಖ’ವೆಂಬ | ‘ಸೂಖೀ’ ಎಂಬ |
| ೫೦ | ೨೩ | ಮುಖಸಾ | ಮುಖವಾ |
| ೫೯ | ೨೦ | ಮದ್ಗೋರಾ | ಮಹೋರಾ |
| ೬೪ | ೨೬ | ಚಿನಾಗ | ಚಿನಾರ |
| ೮೭ | ೭ | ಸೋಬೆನ್ | ಸೋಲೆನ್ |
| ೧೧೬ | ೨೩ | ಹನುಮಾನ ಡೋಲಾ | ಹನುಮಾನಡೋಕಾ |

# ಪ್ರಕಾಶಕರ ಮುನ್ನುಡಿ

**ಪ್ರಿಯ ಕನ್ನಡಿಗರೇ,**

ನಾಡಿನ ಸರ್ವಾಂಗಸುಂದರವಾದ ಏಳಿಗೆಯಾಗಬೇಕಾದರೆ ನಾಡಿನ ನಾಡಿಗಳು ಸುತ್ತಲೂ ಬಲಗೊಳ್ಳಬೇಕು. ನಾಡಿನ ಚೈತನ್ಯವು ಸರ್ವತೋಮುಖವಾಗಿ ಹರಿದಾಡಬೇಕು; ನಾಡಿನವರು ನಾನಾಬಗೆಯ ಚಟುವಟಿಕೆಗಳಲ್ಲಿಯೂ ಮುಂದರಿಯಬೇಕು; ಧೈರ್ಯೋತ್ಸಾಹ ಸಾಹಸಗಳನ್ನು ತೋರ್ಪಡಿಸಬೇಕು. ಈ ಧೈರ್ಯೋತ್ಸಾಹ ಸಾಹಸಗಳ ಬೆಳವಣಿಗೆಗೆ ಪ್ರವಾಸವೂ ಯಾತ್ರೆಯೂ ಅತ್ಯಂತ ಸಹಾಯಕಾರಿಯಾದುವು. ಕೂಪಮಂಡೂಕದ ಸಂಕುಚಿತವೃತ್ತಿಯನ್ನು ತೊರೆದು ವಿಶಾಲವಾದ ಆಕಾಶಛತ್ರದ ಕೆಳಗೆ, ಸರ್ವಾಂತರ್ಯಾಮಿಯಾದ ಪರಮಾತ್ಮನ ಮೇಲೆ ಭಾರವನ್ನಿಟ್ಟು ಜಗತ್ತೇ ತನ್ನ ಮನೆಯೆಂದು ತಿಳಿದು ಬಗೆಬಗೆಯ ದೇಶಗಳನ್ನೂ ಜನರನ್ನೂ ನಡತೆನಡಾವಳಿಗಳನ್ನೂ ಉಡಿಗೆ ತೊಡಿಗೆಗಳನ್ನೂ ಆಟನೋಟಗಳನ್ನೂ ತಿಂಡಿತಿನಸುಗಳನ್ನೂ ಸೃಷ್ಟಿ ಸೌಂದರ್ಯಗಳನ್ನೂ ಕಣ್ಣಿನಿಂದ ಕುಡಿಯುವದರಿಂದ ವಿಲಕ್ಷಣವಾದ ಬೋಧವೂ ಶಕ್ತಿಸಾಹಸಗಳೂ ಮನೋವಿಕಾಸವೂ ಉಂಟಾಗುವವೆಂಬುದರಲ್ಲಿ ಸಂಶಯವಿಲ್ಲ. ಯಾವ ದೇಶದ ಜನರು ಪ್ರವಾಸಯಾತ್ರೆಗಳಲ್ಲಿ ಹೆಚ್ಚು ಪ್ರೇಮಾಸಕ್ತಿಗಳನ್ನು ತೋರಿಸುವರೋ ಆ ದೇಶವು ಉದಯೋನ್ಮುಖವಾಗಿರುವದೆಂದು ಖಂಡಿತವಾಗಿ ಹೇಳಬಹುದು.

ಪಾಶ್ಚಿಮಾತ್ಯರು ಇಷ್ಟು ನಾನಾ ಬಗೆಯಿಂದ ಮುಂದರಿಯಲು ಮುಖ್ಯ ಕಾರಣವು ಪರದೇಶ ಪ್ರಯಾಣವು, ಸಾಹಸಬುದ್ಧಿಯು, ಸಂಕಟಗಳನ್ನು ಎದುರಿಸುವ ಹೆಮ್ಮೆಯು. ಆಲ್ಪ್ಸ, ಹಿಮಾಲಯದಂಥ ಉನ್ನತವಾದ ಪರ್ವತಗಳನ್ನು ಏರುವದೂ ತೀರ ಕಾಡು ಜನರಲ್ಲಿ ಕೂಡ ಸೇರಿ ಅನೇಕ ಗಂಡಾಂತರಗಳಿಗೆ ಗುರಿಯಾಗಿ ಅವರ ನಡೆನುಡಿಗಳನ್ನು ಪರೀಕ್ಷಿಸುವದೂ ಗುಡ್ಡಗವಿ ಕಂದರಗಳಲ್ಲಿಯೂ ನಿರ್ಜನವಾದ ಪ್ರದೇಶಗಳಲ್ಲಿಯೂ ನಿರ್ಭಯದಿಂದ ತಿರುಗಾಡಿ ವಿಚಿತ್ರವಾದ ಅನುಭವ

ವನ್ನು ಪಡೆಯುವದೂ ಇವುಗಳಲ್ಲಿ ಪಾಶ್ಚಿಮಾತ್ಯರಿಗೆ ಬಲು ಪ್ರೇಮ. ನಮ್ಮವರೋ ಮನೆಬಿಟ್ಟು ನೆರೆಮನೆಗೆ ಹೋಗಲಿಕ್ಕೂ ಹೆದರುವರು. ಪರದೇಶದವರು ಆಕಾಶದಲ್ಲಿ ಹಾರಾಡಲಿಕ್ಕೂ ಚಂದ್ರಲೋಕಕ್ಕೆ ಕೂಡ ಹಾರಿ ಹೋಗುವದಕ್ಕೂ ಮುಂದರಿಯುತ್ತಿರುವಾಗ ನಮ್ಮವರು ತಮ್ಮ ದೇಶವನ್ನಾದರೂ ಪ್ರವಾಸ ಮಾಡಿ ನೋಡುವದು ಅವಶ್ಯವಲ್ಲವೇ? ಹಿಂದುಸ್ಥಾನದಲ್ಲಿ ಎಲ್ಲ ಜನಾಂಗದವರು ಎಲ್ಲ ಧರ್ಮದವರು ಕಲೆತಿರುವದರಿಂದಲೂ ಎಲ್ಲ ತರದ ಹವೆ ನೆಲಗಳಿರುವದರಿಂದಲೂ ಇದೊಂದು ಸಣ್ಣ ಜಗತ್ತೆಂದೇ ಹೇಳಬಹುದು. ಹಿಂದುಸ್ಥಾನದ ಪ್ರವಾಸವೆಂದರೆ ಸ್ವಲ್ಪದರಲ್ಲಿ ಜಗತ್ತಿನ ಪ್ರವಾಸವೇ ಸರಿ.

ಇಡೀ ಭಾರತ ದೇಶವನ್ನು ಸಂಚರಿಸಿ ನೋಡಿದರೂ ಅದರ ಮುಕುಟಮಣಿಯಾದ ಹಿಮಾಲಯ ಪರ್ವತವನ್ನು ನೋಡದಿದ್ದರೆ ಅವರ ಜನ್ಮವು ವ್ಯರ್ಥ. ವೇದಕಾಲದಿಂದಲೂ ಇಂದಿನವರೆಗೆ ಜ್ಞಾನ ಗಂಗೆಯು ಆ ಪರ್ವತರಾಜನಿಂದಲೇ ಹರಿದು ಬಂದು ಲೋಕವನ್ನೆಲ್ಲ ತಣಿಸುತ್ತಿರುವಳು. ಸುಧಾರಣೆಯ ನವಜೀವನದ ಗಾಳಿಯು ಬೀಸುತ್ತಿರುವದು ಉತ್ತರದಿಂದಲೇ. ಹಿಮಾಲಯದಲ್ಲಿಯ ಪವಿತ್ರ ಕ್ಷೇತ್ರಗಳನ್ನು ಒಮ್ಮೆ ನೋಡಿದರೆ ಉಳಿದ ಕ್ಷೇತ್ರಸ್ಥಳಗಳು ನಿಸ್ತೇಜವಾಗುವವು. ಆ ಪರ್ವತದ ಆಧ್ಯಾತ್ಮಿಕ ಮಾಹಾತ್ಮೆಯು ಇಂದಿಗೂ ಅಚ್ಚಳಿಯದೆ ಉಳಿದಿರುವದು. ಅದು ಇಂದಿಗೂ ಅನೇಕ ಋಷಿ ಮುನಿಗಳ ಆಶ್ರಯಸ್ಥಾನವಾಗಿರುವದು. ಸ್ವಾಮಿ ಶ್ರದ್ಧಾನಂದರೂ ಸ್ವಾಮಿ ವಿವೇಕಾನಂದರೂ ತಮ್ಮ ಚಟುವಟಿಕೆಯ ಕೇಂದ್ರಸ್ಥಾನವಾದ ಮಠಗಳನ್ನೂ ಆಶ್ರಮಗಳನ್ನೂ ಗುರುಕುಲಗಳನ್ನೂ ಅಲ್ಲಿಯೇ ಸ್ಥಾಪಿಸಿದರು. ಇಂಥ ಪುಣ್ಯತಮವಾದ ಪರ್ವತರಾಜನನ್ನು ಕನ್ನಡಿಗರು ಸಂದರ್ಶಿಸುವದು ಅವಶ್ಯ.


ಇಂಥ ಪ್ರಯಾಣಿಕರಿಗೆ ಅನುಕೂಲವಾಗಬೇಕೆಂದು ಶ್ರೀ ಭಾರತ ಸಂಚಾರೀ ಕೃಷ್ಣ ಗೋಸಾವಿಯವರು ಹಿಮಾಲಯದಲ್ಲೆಲ್ಲ ಪ್ರವಾಸ ಮಾಡಿ, ತಮಗಾದ ಅನುಭವ, ಹಾದಿಬಟ್ಟೆ, ಅಲ್ಲಿದ್ದ ಅನುಕೂಲತೆಗಳು ನೋಡತಕ್ಕ ನೋಟಗಳು, ದೇವಾಲಯಗಳು, ಆರಾಧಿಸತಕ್ಕ ಪೂಜ್ಯರು

ಮುಂತಾದ ಅನೇಕ ಉಪಯುಕ್ತ ಸಂಗತಿಗಳಿಂದೊಡಗೂಡಿದ ಈ ಪುಸ್ತಕವನ್ನು ಬರೆದು ಕನ್ನಡಿಗರ ಮೇಲೆ ಮಹದುಪಕಾರವನ್ನು ಮಾಡಿರುವರು. ಮರಾಠಿ, ಬೆಂಗಾಲಿ, ಗುಜರಾಥಿ ಮುಂತಾದ ಭಾಷೆಗಳಲ್ಲಿ ಹಿಮಾಲಯ ಪ್ರವಾಸಿಕರಿಗೆ ಅತ್ಯುಪಯುಕ್ತವಾದ ಗ್ರಂಥಗಳು ಅನೇಕವಾಗಿದ್ದರೂ ಕನ್ನಡದಲ್ಲಿ ಒಂದೂ ಇದ್ದಿಲ್ಲ. ಈ ಕೊರತೆಯನ್ನು ಹೋಗಲಾಡಿಸಿದ್ದು ಇದೇ ಮೊದಲು. ನೇಪಾಳ, ಕಾಶ್ಮೀರ, ಗಂಗೋತ್ರಿ, ಜಮನೋತ್ರಿ, ಬದರೀ, ಕೇದಾರ ಮುಂತಾದ ಹಿಮಾಲಯದಲ್ಲಿಯ ಎಲ್ಲ ಮುಖ್ಯಸ್ಥಳಗಳ ವರ್ಣನೆಯೂ ಪ್ರವಾಸಿಗಳಿಗೆ ಬೇಕಾದ ಎಲ್ಲ ಸಂಗತಿಯೂ ಇದರಲ್ಲಿ ದೊರೆಯುವದು. ಅನೇಕ ರಮಣೀಯ ಸ್ಥಳಗಳ ಸುಂದರ ಚಿತ್ರಗಳನ್ನೂ ವಿಪುಲವಾಗಿ ಸೇರಿಸಿರುವದರಿಂದ ಚಿನ್ನಕ್ಕೆ ಕುಂದಣವನ್ನಿಟ್ಟಂತಾಗಿರುವದು. ಈ ಗ್ರಂಥದ ಮೂಲಪ್ರತಿಯನ್ನು ಚನ್ನಾಗಿ ಶೋಧಿಸಿ ಭಾಷೆಯನ್ನೂ ವಿಷಯ ಜೋಡಣೆಯನ್ನೂ ಚನ್ನಾಗಿ ತಿದ್ದಿ ಒಪ್ಪ ಹಾಕಿ ಹೊಸ ಬಣ್ಣವನ್ನು ತಂದುಕೊಟ್ಟುದಕ್ಕಾಗಿ ಶ್ರೀ ಪುರೋಹಿತ ಹಣಮಂತಾಚಾರ್ಯರು ಎಂ. ಎ. ಅವರ ಉಪಕಾರವನ್ನು ಸ್ಮರಿಸದಿರಲಾರೆವು. ಮುದ್ದಾಗಿ, ಮುದ್ರಿಸಿಕೊಟ್ಟುದಕ್ಕಾಗಿ ವಿಜಯ ಮುದ್ರಣಾಲಯದವರನ್ನೂ ಕೊಂಡಾಡುವೆವು. ಕನ್ನಡಿಗರೂ ಇದನ್ನು ಎತ್ತಿಕೊಂಡು ಮುದ್ದಾಡಿ ಯಾತ್ರಾಮುಖರಾದರೆ ಅವರನ್ನೂ ಕೊಂಡಾಡದಿರುವೆವೇ? ಹಾಗೆ ಕೊಂಡಾಡಿಸಿಕೊಳ್ಳುವಿರೆಂದು ನಂಬಿರುವ,

ಧಾರವಾಡ
ತಾ॥ ೨೦-೪-೧೯೩೨


ನಿಮ್ಮವನೇ ಆದ,
**ಸುರೇಂದ್ರ ಶಿವರಾವ ದೇಸಾಯಿ** ಎಂ. ಎ.
ಕಾರ್ಯದರ್ಶಿ, ಕ. ಶಿ. ಸಮಿತಿ, ಧಾರವಾಡ.

ಶ್ರೀಕೃಷ್ಣ ಗೋಸಾವಿ



ಭಾರತ ಸಂಚಾರಿ.

# ಉತ್ತರಾಖಾಂಡದ ನಕಾಶೆಯು.



# ನನ್ನ ಹಿಮಾಲಯದ ಯಾತ್ರೆ.

## ೧ ನೇ ಪ್ರಸಂಗ.

### ಆತ್ಮಿಕ ಕ್ಷುಧೆಯೂ ಹಿಮಗಿರೀಂದ್ರನ ಆಶ್ರಯದಲ್ಲಿ ಹೊಂದಿದ ಶಾಂತಿಲಾಭವೂ.

ದೈವೀ ಹ್ಯೇಷಾ ಗುಣಮಯೀ ಮಮಮಾಯಾ ದುರತ್ಯಯಾ।
ಮಾಮೇವ ಯೇಪ್ರಪದ್ಯಂತೆ ಮಾಯಾಮೇತಾಂ ತರಂತಿತೆ ॥ ಗೀತಾ

ಆತ್ಮಿಕಕ್ಷುಧೆಯು

ಭಗವಂತನ ಅಗಾಧವಾದ ತ್ರಿಗುಣಾತ್ಮಕ ಮಾಯೆಯಿಂದ ಪಾರಾಗಿ ನಿಜಾನಂದವನ್ನು ಪಡೆಯಬೇಕಾದರೆ ಅವನಿಗೇ ಶರಣು ಹೋಗಬೇಕಲ್ಲದೆ ಮತ್ತಾವ ಉಪಾಯಗಳಿಂದಲೂ ಇದು ಸಾಧ್ಯವಿಲ್ಲ. ಮೇಲಿನ ಗೀತೆಯ ವಾಕ್ಯವೂ ಇದನ್ನೇ ಸ್ಪಷ್ಟಗೊಳಿಸುತ್ತದೆ. ಅಂದಮೇಲೆ ಆ ಪರಮಾತ್ಮನನ್ನು ಅನನ್ಯಭಾವದಿಂದ ಭಜಿಸಲು ಬೇಕಾದ ಸಾಧನ ಸಂಪತ್ತಿಯನ್ನು ಸಂಗ್ರಹಿಸಿ, ಅದಕ್ಕೆ ವಿರೋಧಕವಾದ ವಿಚಾರಗಳನ್ನೆಲ್ಲ ಬಿಟ್ಟುಗೊಟ್ಟು ಭಜನೆ, ಕೀರ್ತನೆ, ಧ್ಯಾನ, ಆತ್ಮಾರ್ಪಣೆಗಳಲ್ಲಿಯೇ ಆಯುಷ್ಯ ಕಳೆಯುವುದು ಯುಕ್ತವಲ್ಲವೇ? ಹಸಿವೆಯಿಂದ ಬಳಲುವವನಿಗೆ ಅನ್ನ ನೀರು ಕೊಟ್ಟರೆ ಹೇಗೆ ಅವನು ಶಾಂತನಾಗುವನೋ ಅದೇ ಪ್ರಕಾರ ಆತ್ಮಿಕ ಕ್ಷುಧೆಯುಂಟಾದವನಿಗೆ ಪರಮಾತ್ಮನ ನಾಮಗುಣ ಸಂಕೀರ್ತನ ಮಾಡುವುದರಿಂದಲೇ ತೃಪ್ತಿಯುಂಟಾಗುವುದಲ್ಲದೆ ಇನ್ನಿತರ ಪದಾರ್ಥಗಳಿಂದ ಅವನೆಂದಿಗೂ ಶಾಂತಿ

ಯನ್ನು ಹೊಂದಲಾರನು. ಮತ್ತು ಈ ರೀತಿಯಿಂದ ಪರಮಾತ್ಮನ ಧ್ಯಾನ ಮಾಡಬೇಕಾದರೆ ಏಕಾಂತ ಸ್ಥಳವೂ ಬೇಕಾಗುವುದು. ಆತ್ಮಿಕ ಕ್ಷುಧೆಯುಂಟಾದವನಿಗಲ್ಲವೆ ಇವೆಲ್ಲ ವಿಚಾರಗಳ ಪ್ರಾದುರ್ಭಾವವು? ಇರಲಿ. ಇಂಥ ಆತ್ಮಿಕ ಕ್ಷುಧೆಯು ನನ್ನಲ್ಲಿ ಪ್ರಬಲವಾದುದರಿಂದಲೇ ಹಿಮಾಲಯದಲ್ಲಿಯ ಯಾವುದೊಂದು ನಿರ್ಜನ, ಏಕಾಂತ ಸ್ಥಳದಲ್ಲಿ ಕುಳಿತು ಪರಮಾತ್ಮನ ಧ್ಯಾನ ಮಾಡಬೇಕೆಂಬ ವಿಚಾರವುಂಟಾಯಿತು. ಮತ್ತು ಹೀಗೆ ಮಾಡುವದರಿಂದ–ಹಿಮಾಲಯದ ಏಕಾಂತ ಸ್ಥಳಗಳಲ್ಲಿ ಕುಳಿತು ಧ್ಯಾನ ಮಾಡುವುದರಿಂದ ನನ್ನ ಆತ್ಮಿಕ ಕ್ಷುಧೆಯೂ ಕಡಿಮೆಯಾಗುವದೆಂಬ ಅನುಭವವುಂಟಾಯಿತು. ಆ ನನ್ನ ಪ್ರವಾಸದ ವೃತ್ತಾಂತವನ್ನೂ, ಹಿಮಗಿರೀಂದ್ರನಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನೂ ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ವಿವರಿಸುವೆನು.

ಮೊದಲು ನಾನು ಹರಿದ್ವಾರಕ್ಕೆ ಹೋದೆನು. ಆದರೆ ಅಲ್ಲಿ ಅನೇಕ ಜನರು ಯಾತ್ರಾರ್ಥವಾಗಿ ಬರುತ್ತಿರುವುದರಿಂದ ನನಗೆ ಬೇಕಾದ ಏಕಾಂತ ಸ್ಥಳವು ಅಲ್ಲಿ ದೊರೆಯಲಿಲ್ಲ. ಆದುದರಿಂದ ಹರಿದ್ವಾರದಿಂದ ಹೃಷೀಕೇಶಕ್ಕೆ ಹೋದೆನು. ಹೃಷೀಕೇಶವು ಹರಿದ್ವಾರದಿಂದ ೧೫ ಮೈಲಿನ ಮೇಲಿದೆ. ಇಲ್ಲಿ ಸ್ವರ್ಗಾಶ್ರಮ, ಕೈಲಾಸಾಶ್ರಮ, ರಾಮಾಶ್ರಮ ಮುಂತಾದ ಅನೇಕ ಆಶ್ರಮಗಳಿದ್ದು ಸಾವಿರಾರು ಸಾಧುಗಳು ಇಲ್ಲಿ ನೆಲೆಸಿರುವರು. ಸಾಧು ಸನ್ಯಾಸಿಗಳಿಗಾಗಿ ಇಲ್ಲಿ ಅನೇಕ ಅನ್ನಛತ್ರಗಳಿವೆ. ಆದರೆ ನನಗೆ ಯಾವ ಅನ್ನಛತ್ರದ ಅವಶ್ಯಕತೆಯೂ ಇರಲಿಲ್ಲ. ಏಕಾಂತ ಸ್ಥಳವೊಂದು ಬೇಕಾಗಿದ್ದಿತು.

ಸ್ವರ್ಗಾಶ್ರಮ

ಸ್ವರ್ಗಾಶ್ರಮವು ಹೃಷೀಕೇಶದಿಂದ ೨ ಮೈಲಿನ ಮೇಲಿದೆ. ಪಾವನ ಗಂಗೆಯು ತನ್ನ ಶುಭ್ರವಾದ ಜಲದಿಂದ ಎಲ್ಲರಿಗೂ ಆನಂದವನ್ನು ಕೊಡುತ್ತಿದ್ದಾಳೆ. ಇಲ್ಲಿ ನೂರಾರು ಸಾಧುಗಳಿಗೆ ಇರಲು ಅನುಕೂಲವಾಗಬೇಕೆಂದು ಹಲವು ಕುಟೀರಗಳು ಕಟ್ಟಲ್ಪಟ್ಟಿವೆ. ಸುತ್ತಲೂ ಸಣ್ಣ ಅಡವಿಯಿದ್ದು ಮಾವು, ಬಾಳೆ, ಬೆಲಪತ್ರಿ ಫಲವೃಕ್ಷಗಳಿವೆ. **ಬಾಬಾ ಕಾಲಾ ಕಮಲೀ ವಾಲಾ** ಎಂಬುವನು ಇವೆಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಉತ್ತರ ದೇಶದಲ್ಲಿ

ಕಂಬಳಿಗಳಿಲ್ಲವಾದ್ದರಿಂದ, ಇವನ ಹೆಸರಿನ ಮೇಲಿಂದ. ಇವನು ದಕ್ಷಿಣ ದೇಶದವನು- ಕರ್ನಾಟಕದವನು- ಇರಬಹುದೆಂದು ಕೆಲವರ ಊಹೆ. ಇವನು ಹೃಷೀಕೇಶದಿಂದ ಗಂಗೋತ್ರಿ ಬದರಿ ಮಾರ್ಗಗಳಲ್ಲಿ ಅನೇಕ ಧರ್ಮಶಾಲೆ. ಅನ್ನಛತ್ರಗಳನ್ನು ಸ್ಥಾಪಿಸಿದ್ದಾನೆ. ಅಲ್ಲದೆ ಆಯುರ್ವೇನ ಔಷಧಾಲಯಗಳನ್ನು ಸ್ಥಾಪಿಸಿದ್ದು ಪುಕ್ಕಟೆ ಔಷಧ ಕೊಡುವ ವ್ಯವಸ್ಥೆ ಮಾಡಿದ್ದಾನೆ. ಈಗ ಈ ಸಂಸ್ಥೆಯು ಪಂಚರ ಕೈಯಲ್ಲಿದೆ. ಸ್ವರ್ಗಾಶ್ರಮದಲ್ಲಿ ಹಲವು ತಿಂಗಳವಾಸಮಾಡಿ ಸಮಾಧಾನ ಹೊಂದಿದೆನು ಹಿಮಾಲಯ

**ಪ್ರತಿದಿನದ ಕಾರ್ಯಕ್ರಮ.**

ದಲ್ಲಿರುವಾಗ ನನ್ನ ವೇಳೆಯನ್ನು ಹೇಗೆ ಕಳೆಯುತ್ತಿದ್ದೆನೆಂಬುದನ್ನು ಇಲ್ಲಿ ಹೇಳಿದರೆ ಅನುಚಿತವಾಗಲಾರದಷ್ಟೇ? ಬೆಳಗಿನ ೪ ಘಂಟೆಗೆದ್ದು ಪ್ರಾತರ್ವಿಧಿಗಳನ್ನು ತೀರಿಸಿ ಗಂಗಾಸ್ನಾನ ಮಾಡಿ, ಗೀತಾ ಭಾಗವತ ಮುಂತಾದ ಉಚ್ಚ ಗ್ರಂಥಗಳ ಅಧ್ಯಯನ ಮಾಡಿ ಸುಮಾರು ೧೨ ಘಂಟೆಗೆ ಪಾಕ ಮಾಡಿಕೊಂಡು ಭೋಜನ ಮಾಡುತ್ತಿದ್ದೆನು. ಸ್ವಲ್ಪ ವಿಶ್ರಾಂತಿ ಹೊಂದಿ ಪುನಃ ಸಾಯಂಕಾಲ ೪ ಘಂಟೆಯ ವರೆಗೆ ಗ್ರಂಥಾವಲೋಕನ ಮಾಡುತ್ತಿದ್ದೆನು. ಅನಂತರ ಎತ್ತರವಾದ ಪ್ರದೇಶದಲ್ಲಿ ತಿರುಗಾಡಲಿಕ್ಕೆ ಹೋಗಿ ಅಲ್ಲಿ ಯಾವದಾದರೊಂದು ಉತ್ತಮವಾದ ಸ್ಥಳದಲ್ಲಿ ಕುಳಿತು ದಾಸರ ಪದಗಳನ್ನು ಹಾಡುತ್ತ ಕೂಡ್ರುತ್ತಿದ್ದೆನು. ಹೀಗೆ ಕೆಲಹೊತ್ತು ಕುಳಿತ ಮೇಲೆ ಅಲ್ಲಿನ ಸೃಷ್ಟಿಸೌಂದರ್ಯದಿಂದ ನನ್ನ ಮನದಲ್ಲಿ ಒಂದು ವಿಧವಾದ ಆನಂದವುಂಟಾಗುತ್ತಿತ್ತು. ಹಲವು ಸಲ 'ನಾನು ಯಾರು, ಇಲ್ಲಿಗೇಕೆ ಬಂದಿರುವೆನು ಎಂಬ ಪರಿವೆಯಿಲ್ಲದೆ ಮೈಮರೆತು ಕೂಡ್ರುತ್ತಿದ್ದೆನು. ಹಿಮಗಿರೀಂದ್ರನ ಸನ್ನಿಧಿಯಲ್ಲಿ ನನಗೆ ದೊರೆತ ಶಾಂತಿಯೇ ಮುಂದಿನ ಪ್ರವಾಸಕ್ಕೆಲ್ಲ ಕಾರಣವಾಯಿತು. ಆತ್ಮಿಕ ಉನ್ನತಿಯನ್ನು ಪಡೆಯಬೇಕೆಂಬ ಉಚ್ಚಧ್ಯೇಯವನ್ನಿಟ್ಟುಕೊಂಡು ಹಿಮಾಲಯದಲ್ಲಿ ಸುಮಾರು ೩೦೦೦ ಮೈಲು ದೂರ ಪ್ರವಾಸಮಾಡಿರುವೆನು. ದಾರಿಯಲ್ಲಿ ನನಗೆ ಯಾವಪ್ರಕಾರದ ದುಃಖಗಳೂ ಬರಲಿಲ್ಲ. ದಾರಿಯನ್ನು ನಡೆಯವುದಾಗದೆ, ಚಳಿಮುಂತಾದ್ದನ್ನು ತಡೆಯವುದಾಗದೆ ಅನೇಕ ಯಾತ್ರಿಕರು ತಿರುಗಿಹೋದುದೂ ನನಗೆ ಗೊತ್ತಿದೆ. ಆದರೆ ಸ್ವಲ್ಪ

ಮನಸ್ಸು ಗಟ್ಟಿಮಾಡಿ ಎಲ್ಲ ಭಾರವನ್ನೂ ಆ ಶ್ರೀಮನ್ನಾರಾಯಣನ ಮೇಲೆ ಹಾಕುವವರಿಗೆ ಯಾವತರಹದ ದುಃಖಗಳೂ ತೋಂದರೆ ಕೊಡಲಾರವು. ಇರಲಿ. ಇನ್ನು ಮೇಲೆ ನನ್ನ ಅನುಭವಗಳನ್ನಷ್ಟೇ ಕೊಡುತ್ತಾ ಹೋಗದೆ ಮಾರ್ಗಗಳಲ್ಲಿದ್ದ ಪ್ರೇಕ್ಷಣೀಯ ಸ್ಥಳಗಳ ಹಾಗು ಅಲ್ಲಿಯ ಅನುಕೂಲತೆಗಳ ಬಗ್ಗೆಯೂ ಬರೆಯುವೆನು.

---

## ೨ನೇ ಪ್ರಸಂಗ.

### ಹಿಮಾಲಯದ ವರ್ಣನೆ ಮತ್ತು ಯಾತ್ರಿಕರು ಮಾಡಬೇಕಾದ ಸಿದ್ಧತೆ.

ಹಿಮಾಲಯವು ಜಗತ್ತಿನಲ್ಲಿ ಎಲ್ಲಕ್ಕೂ ಉನ್ನತವಾದ ಪರ್ವತವು. ಪ್ರಪಂಚದಲ್ಲಿಯ ಒಂಭತ್ತು ಆಶ್ಚರ್ಯಕರವಾದ ಸಂಗತಿಗಳಲ್ಲಿ ಹಿಮಾಲಯವೊಂದಾಗಿದೆ. ಇದು ಸಿಂಧುನದದಿಂದ ಬ್ರಹ್ಮಪುತ್ರದವರೆಗೆ ೧೫೦೦ ಮೈಲು ಉದ್ದವಾಗಿಯೂ, ೨೦೦ ರಿಂದ ೫೦೯ ಮೈಲುಗಳ ವರೆಗೆ ಅಗಲವಾಗಿಯೂ, ಇದ್ದು ಹಿಂದುಸ್ಥಾನದ ಉತ್ತರ ಗೋಡೆಯಂತಿದೆ. ಇದರ ಸರಾಸರಿ ಎತ್ತರವು ೧೮೦೦೦ ಫೂಟು ಇದ್ದರೂ, ೪೪ ಶಿಖರಗಳು ೨೩೦೦೦ ಫೂಟಿನಿಂದ ೨೯೦೦೨ ಫೂಟಿನವರೆಗೆ ಎತ್ತರವಾಗಿರುವುವು. ಎವ್ಹರೆಸ್ಟ ೨೯೦೦೨ ಕಾಂಚನಗಂಗಾ ೨೮೧೬೦ ಧವಲಗಿರಿ ೨೬೮೨೬ ನಂದಾದೇವಿ ೨೫೭೦೦ ಫೂಟು ಮತ್ತು ಕೈಲಾಸ, ಜಮ್ನೋತ್ರಿ ಬದರಿ ಕೇದಾರ ಮುಂತಾದ ಅನೇಕ ಉನ್ನತವಾದ ಶಿಖರಗಳಿರುವವು. ೧೬೦೦೦ ಫೂಟಿನ ಮೇಲ್ಭಾಗವೆಲ್ಲ ೧೨ ತಿಂಗಳೂ ಬರ್ಫಿನಲ್ಲಿ ಮುಚ್ಚಿರುತ್ತದೆ. ೬೦೦೦ ಫೂಟಿನ ಮೇಲ್ಭಾಗವು ೩-೪ ತಿಂಗಳು ಬರ್ಫಿನಲ್ಲಿ ಮುಚ್ಚಿರುತ್ತದೆ.

ಹಿಮಾಲಯ ವರ್ಣನೆ

೧೪೦೦೦ ಫೂಟಿನ ಮೇಲೆ ಹೆಚ್ಚಾಗಿ ಗಿಡಗಳು ಬೆಳೆಯುವದಿಲ್ಲ. ಇದರ ಕೆಳಭಾಗದಲ್ಲಿ ಪೀತದಾರ, ದೇವದಾರ, ಸ್ಪ್ರೂಸ್, ಗ್ರೂಸಬೆರಿ, ಸ್ಟ್ರಾಬೆರಿ, ಸಾಲ್, ಸಫೇದಾ, ಅಕ್ರೋಡ, ಕರಿಬೇವು ಮುಂತಾದ ಅನೇಕಪ್ರಕಾರದ ವೃಕ್ಷಗಳು ಬೆಳೆಯುತ್ತವೆ. ಇಲ್ಲಿ ಆನೆ, ಹುಲಿ, ಕರಡಿ (ಕರಿ ಮತ್ತು ಬಿಳಿ) ಚಿರಚು, ತೋಳ, ಕಿರಬು, ಗಂಡಕ, ಕಸ್ತೂರಿಮೃಗ ಮೊದಲಾದ ಕಾಡಮೃಗಗಳು ಮನೆಮಾಡಿಕೊಂಡಿರುವುವು. ೧೪೦೦೦ ಫೂಟಿನ ಮೇಲೆ ಹಲವು ಸ್ಥಳಗಳಲ್ಲಿ ಬಿಳಿಯ ಶಂಖಗಳು ದೊರೆಯುತ್ತವೆ. ಈ ಭಾಗವು ಒಂದು ಕಾಲದಲ್ಲಿ ಸಮುದ್ರ ಸಪಾಟಿಯಲ್ಲಿರಬಹುದೆಂದು ಹಲವರ ಗ್ರಹಿಕೆ. ಇಲ್ಲಿ ಸೂರ್ಯಪ್ರಕಾಶವು ಕೂಡ ಬೀಳದಂಥ ಎಷ್ಟೋ ದಟ್ಟಡವಿಗಳೂ ಶಿಖರಗಳಿಂದ ವೇಗವಾಗಿ ಹರಿದು ಬರುವ ಅನೇಕ ನದಿಗಳೂ ಇರುವವು. ಕೆಲವು ಕಡೆ ಈ ನದಿಗಳನ್ನು ದಾಟುವುದು ಕಠಿಣವಾಗಿದೆ. ನದಿಗಳನ್ನು ದಾಟುವದಕ್ಕಾಗಿ ಹಲವು ಕಡೆ ನೈಸರ್ಗಿಕ ಬರ್ಫಿನ ಸೇತುವೆಗಳಿವೆ; ಬೇರೆ ಕಡೆಗೆ ಕಂಬಗಳಿಲ್ಲದೆ ನಿಲ್ಲಿಸಿದ ಕಬ್ಬಿಣದ ಸರಪಳಿಯ ಜೋತಾಡುವ ಪೂಲು(Hanging bridge)ಳಿಗವೆ. ಕಾಶ್ಮೀರ ನೇಪಾಳಗಳಲ್ಲಿ ಕೆಲವು ಕಡೆ ದೇವದ್ವಾರದ ಕಂಬಗಳನ್ನು ಹುಗಿದು ಒಂದು ಪ್ರಕಾರದ ಹುಲ್ಲಿನ ಹಗ್ಗದಿಂದ ಪೂಲು ಕಟ್ಟಿದ್ದಾರೆ. ಇವುಗಳನ್ನು ದಾಟುವುದು ಮಾತ್ರ ಕಠಿಣ. ದೊಡ್ಡ ದೊಡ್ಡ ಮರಗಳು ತಾವಾಗಿಯೇ ಒಂದು ದಂಡೆಯಿಂದ ಮತ್ತೊಂದು ದಂಡೆಯವರೆಗೆ ಬಿದ್ದು ಸೇತುವೆಗಳಾಗಿವೆ. ಇವೆಲ್ಲ ಪೂಲುಗಳ ಮೇಲಿಂದ ದಾಟಬೇಕಾದರೆ ಯಾತ್ರಿಕರು ಹೆಚ್ಚು ಜಾಗರೂಕರಾಗಿರಬೇಕು. ಅಲ್ಲದೆ ಅನೇಕ ಕಡೆಗೆ ಭೂಕಂಪದಿಂದ ಪರ್ವತವು ಕಪ್ಪರಿಸುವುದರಿಂದಲೂ, ಬಿರುಗಾಳಿ ಬಿಟ್ಟು, ಮೋಡಗವಿದು ದಾರಿ ಕಾಣದಂತಾಗುವದು! ಮತ್ತೆ ವೇಗದಿಂದ ಹರಿದು ಬರುವ ನದಿಗಳಿಂದಲೂ ಹಲವು ಗಂಡಾಂತರ ಒದಗುವ ಸಂಭವವಿದೆ. ಇವೆಲ್ಲವುಗಳ ಬಗ್ಗೆ ಯಾತ್ರಿಕರು ಹೆಚ್ಚಾಗಿ ಜಾಗರೂಕರಾಗಿರತಕ್ಕದ್ದು. ಅದಲ್ಲದೆ ಹಿಮಾಲಯದಲ್ಲಿ ಅನೇಕ ವನಸ್ಪತಿ, ಖನಿಜ ಪದಾರ್ಥಗಳು ಸಿಗುತ್ತಿದ್ದು ಆಯಾ ಶಾಸ್ತ್ರಜ್ಞರು ಇವುಗಳ ಬಗ್ಗೆ

ಹೆಚ್ಚಾಗಿ ಬರೆಯಬಹುದು. ಹಿಮಾಲಯದ ಅಲ್ಪ ಪರಿಚಯ ಮಾಡಿ ಕೊಟ್ಟು ಇನ್ನು ಮುಂದೆ ಉತ್ತರಾಖಂಡದ ವರ್ಣನೆ ಮಾಡುವೆನು.

ಉತ್ತರಾಖಂಡ. ಅರ್ಥಾತ್ ಗಢವಾಲ ಜಿಲ್ಹೆ

ಉತ್ತರಾಖಂಡವೆಲ್ಲ ಗಢವಾಲ ಜಿಲ್ಹೆಯಲ್ಲಿದೆ. ಗಢವಾಲ ಜಿಲ್ಹೆಯಲ್ಲಿ ಬ್ರಿಟಿಶ್ ಗಢವಾಲ ಹಾಗೂ ಟಿಹರೀ ಗಢವಾಲ ಎಂದು ಎರಡು ಭಾಗಗಳಿವೆ. ಗಂಗೋತ್ರಿ, ಜಮ್ನೋತ್ರಿ ಭಾಗವು ಟಿಹರೀ ಸಂಸ್ಥಾನಕ್ಕೆ ಸೇರಿದೆ. ಈ ಸಂಸ್ಥಾನದ ರಾಜಾನರೇಂದ್ರಸಿಂಹನು ತನ್ನ ಹೆಸರಿನ 'ನರೇಂದ್ರನಗರ'ವೆಂಬುದೊಂದು ಹೊಸ ರಾಜಧಾನಿಯನ್ನು ಕಟ್ಟಿಸಿ ಅಲ್ಲಿಯೇ ವಾಸಮಾಡುತ್ತಿರುವನು. ಇದೇ ಪ್ರಕಾರ ಮೊದಲಿನ ರಾಜರೂ ತಮ್ಮ ಹೆಸರಿನ, ಪ್ರತಾಪನಗರ, ಕೀರ್ತಿನಗರ, ಶ್ರೀನಗರ ಮೊದಲಾದ ನಗರಗಳನ್ನು ಕಟ್ಟಿಸಿದ್ದಾರೆ. ಟಿಹರಿಯು ಈ ಭಾಗದ ರಾಜಧಾನಿಯು. ಬದರಿ ಕೇದಾರಗಳು ಬ್ರಿಟಿಶ್ ಗಢವಾಲಕ್ಕೆ ಸೇರಿದ್ದು ಶ್ರೀನಗರ (ಕಾಶ್ಮೀರದ್ದಲ್ಲ) ವು ಇದರ ರಾಜಧಾನಿಯು. ಇವೆರಡೂ ಭಾಗಗಳು ಕೂಡಿ ಗಢವಾಲ ಜಿಲ್ಹೆಯೆಂಬ ಹೆಸರು. ಗಢವಾಲ ಜಿಲ್ಹೆಯಲ್ಲಿಯೇ ಯಾತ್ರಾಸ್ಥಳಗಳು ಹೆಚ್ಚು. ಪಂಚಬದರಿ, ಪಂಚಪ್ರಯಾಗ, ಪಂಚಕೇದಾರ, ಎರಡು ಕಾಶಿ, ಪಂಚಗಂಗಾ ಮೊದಲಾದ ಅನೇಕ ತೀರ್ಥಕ್ಷೇತ್ರಗಳು ಈ ಭಾಗದಲ್ಲಿಯೇ ಇವೆ. ಪ್ರತಿವರ್ಷ ಸಾವಿರಾರು ಯಾತ್ರಿಕರು ಈ ಭಾಗದಲ್ಲಿ ಅಡ್ಡಾಡುತ್ತಿರುತ್ತಾರೆ. ಮಾರ್ಗಗಳು ಉತ್ತಮವಾಗಿವೆ. ಬೈಲುಪ್ರದೇಶದವರಿಗೆ ಗುಡ್ಡಗಳನ್ನು ಹತ್ತುವುದು ಇಳಿಯುವುದು ಸ್ವಲ್ಪ ಕಠಿಣವೆನಿಸಬಹುದು. ಇವೆಲ್ಲರಲ್ಲಿ ಬದರಿಯ ಮಾರ್ಗವು ಉತ್ತಮವಾಗಿದ್ದು ಕುದುರೆಗಳ ಮೇಲಿಂದ ಅಲ್ಲಿಗೆ ಹೋಗಬಹುದು. ಆದರೆ ಕೇದಾರ, ಗಂಗೋತ್ರಿ, ಜಮ್ನೋತ್ರಿಗಳು ಒಂದಕ್ಕಿಂತೊಂದು ಕಠಿಣವಾಗಿದ್ದು ಸಾಮಾನುಗಳನ್ನು ಕೂಡ, ಆಡು, ಕುರಿಗಳ ಮೇಲೆ ಹೇರಿಕೊಂಡು ಹೋಗಬೇಕಾಗುತ್ತದೆ. ಮಾರ್ಗದಲ್ಲಿ ೨-೩-೪ ಮೈಲಿಗೊಂದರಂತೆ, ಝರಿಯಿದ್ದ ಸ್ಥಳದಲ್ಲಿ ಚಟ್ಟಿ (ಗುಡಿಸಲು) ಇದ್ದು ೩-೪ ನೂರು ಜನರಿಗೂ ಕೂಡ ಇಳಿದುಕೊಂಡು, ಅಡಿಗೆ ಮಾಡಿಕೊಳ್ಳುವ ಅನುಕೂಲತೆಯುಳ್ಳ ಸ್ಥಳಗಳಿವೆ. ಇಲ್ಲಿ ಒಂದೆರಡು ಅಂಗಡಿಗಳಿದ್ದು ಅಕ್ಕಿ,

ಬೇಳೆ, ಹಿಟ್ಟು, ತುಪ್ಪ ಮೊದಲಾದ ಆವಶ್ಯಕ ಪದಾರ್ಥಗಳು ಸಿಕ್ಕುವುವು. ಚಟ್ಟಿಗಳ ಒಡೆಯರೇ ಅಂಗಡಿಕಾರರಾದ್ದರಿಂದ ಇವರಲ್ಲಿ ಸಾಮಾನ ಕೊಂಡರೆ ಮಾತ್ರ ಚಟ್ಟಿಗಳಲ್ಲಿಳಿಯಗೊಡುತ್ತಾರೆ. ಇದರಿಂದಲೇ ಮುಖ್ಯವಾಗಿ ಇವರು ಉಪಜೀವನ ಸಾಗಿಸಿಕೊಳ್ಳುವರು. ಬೈಲು ಪ್ರದೇಶಗಳಂತೆ ಇಲ್ಲಿ ಹೆಚ್ಚು ಹೊಲಗಳಿಲ್ಲ. ಇದ್ದ ಹೊಲಗಳಲ್ಲಿ ಬೆಳೆ ಬರುವುದೂ ಅಷ್ಟಕಷ್ಟೆ. ಕೆಲವು ದಿನ್ನೆಗಳನ್ನು ಕಡಿದು ಹೊಲ ಮಾಡಿ, ಗೋದಿ, ಜವೆಗೋದಿ ಅಕ್ಕಿ, ಗೋವಿನಜೋಳ ಮತ್ತು ಮಸಾಲಿಯ ಪದಾರ್ಥಗಳನ್ನು ಬೆಳೆಯುತ್ತಾರೆ. ಆದರೆ ದನಗಳು ಸಣ್ಣವಿರುವುದರಿಂದ ಹರಗುವ ಬಿತ್ತುವ ಕೆಲಸಗಳನ್ನು ಜನರೇ ಮಾಡುವರು. ಕೆಲವು ಸ್ಥಳಗಳಲ್ಲಿ ಕಾಡುಹಣ್ಣು ಬೆಳೆಯುತ್ತವೆ. ಇದರ ಹೊರ್ತು ಉಣ್ಣೆ ನೇಯುವುದು, ಕುರಿ ಸಾಕುವುದು, ಕುರಿಗಳ ಮೇಲೆ ಅಥವಾ ಸ್ವತಃ ಯಾತ್ರಿಕರನ್ನು ಹೊತ್ತುಕೊಂಡು ಕೆಳಗಿನಿಂದ ಮೇಲಕ್ಕೆ ಒಯ್ಯುವುದು. ಇವೇ ಇಲ್ಲಿಯ ಜನರ ಮುಖ್ಯ ಕಸಬುಗಳು. ಮೇಲಿನಿಂದ ತೊಗಲು ಉಣ್ಣೆ, ಜೇನು ಶಿಲಾಜಿತ್ ವನಸ್ಪತಿ ಮೊದಲಾದ ಪದಾರ್ಥಗಳು ಕೆಳಗೆ ಮುಟ್ಟಿಸಿ ಕೆಳಗಿನಿಂದ ಅಕ್ಕಿ, ಗೋದಿ, ಹಿಟ್ಟು, ಬೇಳೆ ಮುಂತಾದ ಆವಶ್ಯಕವಾದ ಪದಾರ್ಥಗಳನ್ನು ತಂದು ಅಂಗಡಿಕಾರರಿಗೆ ಮುಟ್ಟಿಸುತ್ತಾರೆ. ಇವರು ಕುದುರೆ, ಹೇಸರಗತ್ತೆ, ಕುರಿಗಳ ಮೇಲೆ ಸಾಮಾನುಗಳನ್ನು ಒಯುತ್ತಾರೆ. ಯಾತ್ರಿಕರನ್ನು ಬಹುತರವಾಗಿ ದಾಂಡಿ, ಕಾಂಡಿ, ಝುಂಪಾನ ಮೊದಲಾದ ವಾಹನಗಳ ಮೇಲೆ ಕುಳ್ಳಿರಿಸಿ ಜನರೇ ಹೊತ್ತು ಒಯ್ಯುತ್ತಾರೆ. ಈ ಜನರು ಬಹಳ ಗಟ್ಟಿಗರು. ಕಾಂಡಿ ಎಂಬ ವಾಹನದಲ್ಲಿ ಸಾಮಾನು ಸಹಿತ ಒಬ್ಬ ಯಾತ್ರಿಕನನ್ನು ಕುಳ್ಳಿರಿಸಿಕೊಂಡು ಈ ಕಠಿಣ ಪರ್ವತದೊಳಗಿನ ಎಲ್ಲ ಯಾತ್ರೆಗಳನ್ನು ತೀರಿಸಿಕೊಂಡು ಬರುತ್ತಾರೆ. ದಾಂಡಿ ಮತ್ತು ಝುಂಪಾನವನ್ನು ೪-೬ ಜನರು ಹೊತ್ತುಕೊಂಡು ಒಯ್ಯುತ್ತಾರೆ. ಹೆಂಗಸರು ಹೆಚ್ಚಾಗಿ ಮನೆಯಲ್ಲಿದ್ದು ಒಕ್ಕಲತನ ಮತ್ತು ನೇಯ್ಯುವ ಉದ್ಯೋಗ ಮಾಡುತ್ತಾರೆ. ಇಲ್ಲಿಯ ಜನರೆಲ್ಲರೂ ಬಹುತರವಾಗಿ ಕಂಬಳಿಯ ಉಡಪನ್ನೇ ಧರಿಸುವರು. ಇವರಿಗೆ ಆರಿವೆ, ಸೂಜಿಧಾರ-ಗಳು

ಬಹಳ ಬೇಕಾಗುವುವು. ಇವಕ್ಕಾಗಿ ಯಾತ್ರಿಕರ ಬೆನ್ನುಹತ್ತಿ ಬಹಳವಾಗಿ ಬೇಡಿಕೊಳ್ಳುವರು. ಅನೇಕ ಯಾತ್ರಿಕರು ಕೆಳಗಿನಿಂದ ಧಾರಸೂಜಿಗಳನ್ನು ಒಯ್ದು ಈ ಜನರಿಗೆ ಹಂಚುತ್ತಾರೆ.

ಜನರ ಶೀಲಸ್ವಭಾವಗಳೂ ಅವರ ಬಿಡಾರಗಳೂ

ಇಲ್ಲಿಯ ಜನರು ಬಹಳ ಸರಳಸ್ವಭಾವದವರು, ಸತ್ಯವಾದಿಗಳು. ಉತ್ತರಖಂಡದಲ್ಲಿಯ ಜನರಿಗೆ ಕಳವು ಎಂಬುದು ಗೊತ್ತೇ ಇಲ್ಲ. ಈ ಜನರು ವಿಶೇಷವಾಗಿ ಪರ್ವತ ಶಿಖರಗಳ ಮೇಲೆ ಮನೆಮಾಡಿಕೊಂಡಿರುತ್ತಾರೆ. ಇತ್ತಿತ್ತಲಾಗಿ ಕೆಳಗಿನ ಮಾರ್ಗಗಳಲ್ಲಿಯೂ ಅನೇಕ ಗ್ರಾಮಗಳಾಗಹತ್ತಿವೆ. ಮನೆಗಳ ಮಾಳಿಗೆಗಳಿಗೆ ಪಾಟಿಯ ಕಲ್ಲುಗಳನ್ನು ಹೊಚ್ಚಿ ಅದರ ಕೆಳಗೆ ಭುಜಪತ್ರವನ್ನು ಹಾಕುತ್ತಾರೆ. ಇದರಿಂದ ಎಂಥ ಮಳೆ ಗಾಳಿ ಬಂದರೂ ಬಾಧೆ ತಟ್ಟುವದಿಲ್ಲ. ಮೇಲಿನಿಂದ ಹರಿದು ಬರುವ ನೀರನ್ನು ಕಟ್ಟಿ ಅದನ್ನು ಎತ್ತರದ ಮೇಲಿಂದ ಕೆಳಗೆ ಬೀಳುವಂತೆ ಮಾಡಿ ಅದರಿಂದ ಬೀಸುವ ಕೆಲಸವು ಸುಲಭವಾಗಿ ಸಾಗುವಂತೆ ಮಾಡಿದ್ದಾರೆ. ಈ ದಾರಿಯಲ್ಲಿ ಇಂಥ ಅನೇಕ ಚಕ್ಕಿಗಳು ನೋಡಲಿಕ್ಕೆ ಸಿಕ್ಕುತ್ತವೆ. ಇಲ್ಲಿ ಹೆಚ್ಚಾಗಿ ಕ್ಷತ್ರಿಯರೂ ಬ್ರಾಹ್ಮಣರೂ ಇರುತ್ತಿದ್ದು ಎಲ್ಲರೂ ಮಾಂಸಾಹಾರಿಗಳಾಗಿದ್ದಾರೆ. ಮುಸಲ್ಮಾನರು ಇಲ್ಲವೇ ಇಲ್ಲ. ಹಿಮಾಲಯದ ಈ ಭಾಗದಲ್ಲಿ ನಂದಾದೇವಿ, ಕಾಮೆಂಟ, ತ್ರಿಶೂಲ, ದೂನಾಗಿರಿ, ಬದರಿನಾಥ, ಕೇದಾರನಾಥ ಮೊದಲಾದ ಉನ್ನತ ಶಿಖರಗಳೂ ಗಂಗೆಯಮುನೆ, ಅಲಕನಂದ, ಮಂದಾಕಿನಿ, ರಾಮಗಂಗೆ, ವಿಷ್ಣು ಮೊದಲಾದ ದೊಡ್ಡ ದೊಡ್ಡ ನದಿಗಳ ಅನೇಕ ಶಾಖೆಗಳೂ ಇವೆ. ಲಕ್ಷ್ಮಣ ಝುಲಾದಿಂದ ಹೊರಟು ೭೭೫ ಮೈಲಿನ ನಾಲ್ಕು ಯಾತ್ರೆಗಳನ್ನು ಮಾಡಿಕೊಂಡು ಬರುವಾಗ ಟಿಹರಿ, ಉತ್ತರಕಾಶಿ, ಶ್ರೀನಗರ ಮೊದಲಾದ ಕೆಲವು ಸ್ಥಳಗಳ ಹೊರ್ತು ಮತ್ತೆಲ್ಲಿಯೂ ಬೈಲು ಪ್ರದೇಶಗಳಿಲ್ಲ. ಸುತ್ತಲೂ ದಟ್ಟಡವಿಯಿದ್ದರೂ ಬದರಿ ಕೇದಾರಗಳಲ್ಲಿ ಉರುವಲು ಬಹಳ ತುಟ್ಟಿ. ಒಬ್ಬನ ಅನ್ನವಾಗಬೇಕಾದರೆ ೨ ಆಣೆಗಳ ಕಟ್ಟಿಗೆ ಬೇಕಾಗುತ್ತದೆ.

ಕಾಶ್ಮೀರ, ಸಿಮ್ಲಾ, ನೈನಿತಾಳ, ದಾರ್ಜಿಲಿಂಗ ಮತ್ತು ಶಿಲೊಂಗ ಮೊದಲಾದ ಸ್ಥಳಗಳಲ್ಲಿ ಮೋಟರು, ರಿಕ್ಷಾ, ಕುದುರೆ ಮೊದಲಾದ ವಾಹನಗಳಿದ್ದು ಗಢವಾಲ ಜಿಲ್ಹೆಯಲ್ಲಿ ಮಾತ್ರ ಡಾಂಡಿ, ಕಾಂಡಿ, ಝುಂಪಾನ ಮೊದಲಾದ ಜನರು ಹೊರುವ ವಾಹನಗಳಿಂದಲೇ ಯಾತ್ರೆ ಮಾಡಬೇಕಾಗುತ್ತದೆ. ಈ ವಾಹನಗಳ ಬಾಡಿಗೆಯ ದರವೂ ಹೆಚ್ಚುಕಡಿಮೆಯಿದ್ದು ಸಾಧಾರಣವಾಗಿ ಹೋಗ ಬರುವ ಬಾಡಿಗೆ ಕೂಡಿ ೧೫೦ ರೂ. ಯಿಂದ ೫೦೦ರ ವರೆಗೆ ಬೀಳುವದು. ಈ ವಾಹನಗಳು ಹರಿದ್ವಾರ, ಹೃಷಿಕೇಶ, ದೇಹರಾ, ಮಸೂರಿಗಳಲ್ಲಿ ಅನೇಕ ಕಂಪನಿಗಳ ಮುಖಾಂತರವಾಗಿ ದೊರೆಯುತ್ತಿದ್ದು, ಅವುಗಳ ಬಾಡಿಗೆಯನ್ನು ಅಲ್ಲಿಯ ವ್ಯವಸ್ಥಾಪಕರಿಂದ ಗೊತ್ತುಮಾಡಬೇಕಾಗುತ್ತದೆ. ಬಾಡಿಗೆಯನ್ನು ಗೊತ್ತು ಮಾಡಿದ ಮೇಲೆ, ಎಲ್ಲ ಕರಾರ ಸಹಿತ ಒಂದು ಕರಾರಪತ್ರ ಬರೆಸಿಕೊಳ್ಳಬೇಕು. ಅಂದರೆ ಯಾತ್ರಿಕರಿಗೆ ತೊಂದರೆಯಾಗುವುದಿಲ್ಲ.

ಇಲ್ಲಿ ಸಿಕ್ಕತಕ್ಕ ವಾಹನಗಳು.

ಹಿಮಾಲಯದ ಈ ಯಾತ್ರೆ ಮಾಡಬೇಕೆನ್ನುವವರು ಗಟ್ಟಿಗರೂ ಆರೋಗ್ಯವುಳ್ಳವರೂ, ನಡೆಯಲು ಶಕ್ತಿಯುಳ್ಳವರೂ ಇರಬೇಕಲ್ಲದೆ ಸ್ವಲ್ಪ ಕಷ್ಟ ಒದಗಿದರೂ ಸಹನ ಮಾಡಿಕೊಳ್ಳುವಂಥವರಿರಬೇಕು. ತಕ್ಕಮಟ್ಟಿಗೆ ಧನವಂತರೂ ಇರಬೇಕು. ಅಂದರೆ ಯಾತ್ರೆಯ ನಿಜವಾದ ಆನಂದವುಂಟಾಗುವದು. ಯಾತ್ರಿಕರು ಮಾಡಬೇಕಾದ ಉಡುಪಿನ ಸಿದ್ಧತೆಯು ಕೆಳಗಿನಂತಿದೆ.

ಯಾತ್ರಿಕರು ಮಾಡಬೇಕಾದ ಸಿದ್ಧತೆ ಮತ್ತು ಉಡುಪು

೧ ಉತ್ತಮ ಉಣ್ಣೆಯ ಉಡುಪಿನ ೨ ಜೋಡುಗಳು
೨ ಕಂಬಳಿ ಅಥವಾ ರಗ್ಗು
೩ ಒಂದು ಬಗಲು ಚೀಲ. ಆದರಲ್ಲಿ ಅವಶ್ಯಕವಾದ ಕೆಲವು ಪಾತ್ರೆಗಳು ಮತ್ತು ಔಷಧಗಳು.
೪ ಒಂದು ವಾಟರ ಬ್ಯಾಗ (ನೀರಿನ ಚೀಲ)
೫ ಒಣಗಿದ ಹಣ್ಣುಗಳು, ದ್ರಾಕ್ಷೆ, ಪಿಸ್ತೆ-ಬದಾಮು ಮುಂತಾದ್ದು.

೬ ಭೋಜನದ ಸಾಮಗ್ರಿ (೨ ದಿವಸ ಸಾಲುವಷ್ಟು.)
೭ ಬೂಟು, ಕಾಲಚೀಲ ಮತ್ತು ಬ್ಯಾಂಡೇಜುಗಳು.
೮ ಒಂದು ವಿದ್ಯುದ್ದೀಪ ಮತ್ತು ಒಂದು ಚಿಕ್ಕ ಸ್ಟವ್ಹು.
೯ ಒಂದು ಕೊಡೆ ಇಲ್ಲವೆ ರೇನಕೋಟ (ಮಳೆಯಂಗಿ)


**ಸೂಚನೆ:-** ಯಾತ್ರಿಕರು ಪ್ರವಾಸ ಮಾಡುವಾಗ ಕೆಳಗಿನ ಸೂಚನೆಗಳನ್ನು ಅವಶ್ಯವಾಗಿ ಲಕ್ಷದಲ್ಲಿಡಬೇಕು.

(೧) ಪ್ರವಾಸವನ್ನು ಯಾವಾಗಲೂ ಬೆಳಗಿನ ಜಾವದಲ್ಲಿ ಅಂದರೆ ೮ ರಿಂದ ೯ರ ವರೆಗೆ ಮತ್ತು ಸಾಯಂಕಾಲದಲ್ಲಿ ೫ರಿಂದ ೭ರ ವರೆಗೆ ಮಾತ್ರ ಮಾಡಬೇಕು. ಬಿಸಿಲಿನಲ್ಲಿ ಎಂದಿಗೂ ಪ್ರವಾಸ ಮಾಡಬಾರದು.


(೨) ಮಾರ್ಗದಲ್ಲಿ ಸಿಕ್ಕಸಿಕ್ಕ ಸ್ಥಳಗಳಲ್ಲಿ ನೀರು ಕುಡಿಯಬಾರದು. ಯಾವಾಗಲೂ ನೀರು ಮರಳಿಸಿಕೊಂಡು ಆರಿಸಿ ಕುಡಿಯಬೇಕು; ಇಲ್ಲವೆ ಕೆಲ ಹೊತ್ತಿನವರೆಗೆ ಪಾತ್ರೆಯಲ್ಲಿಟ್ಟು ನಂತರ ಸೋಸಿ ಕುಡಿಯಬೇಕು.

(೩) ಗೋದಿ, ತುಪ್ಪ ಸಕ್ಕರೆ ಮುಂತಾದ ಸ್ನಿಗ್ಧಪದಾರ್ಥಗಳನ್ನೇ ಹೆಚ್ಚಾಗಿ ಸೇವಿಸಬೇಕು. ಮೆಣಸು ಮಸಾಲಿಗಳನ್ನು ಹೆಚ್ಚಾಗಿ ಉಪಯೋಗಿಸಬಾರದು.

ಇವಲ್ಲದೆ ಯಾತ್ರಿಕರಿಗೆ ಅಲ್ಲಲ್ಲಿ ಅನುಭವದಿಂದ ಅನೇಕ ಸೂಚನೆಗಳು ತಮ್ಮಿಂದ ತಾವೇ ಗೊತ್ತಾಗುವುವು. ಅವನ್ನೆಲ್ಲ ಸ್ಥಳಸಂಕೋಚದ ಮೂಲಕ ಇಲ್ಲಿ ಬರೆಯಲಾರದೆ ಮುಂದಿನ ಪ್ರಕರಣದಲ್ಲಿ ಬದರಿ-ಕೇದಾರ ಯಾತ್ರೆಯ ವರ್ಣನೆ ಮಾಡುವೆನು.



.ಶ್ರೀ ಬದರೀನಾಥ ದೇವಾಲಯ




ಶ್ರೀಬದರೀನಾರಾಯಣ ದೇವರು

# ೩ ನೇ ಪ್ರಸಂಗ.

## ಬದರೀ-ಕೇದಾರ ಯಾತ್ರೆಯು.

ಬದರಿಯ ಯಾತ್ರೆಯು ಚತುರ್ಧಾಮಗಳಲ್ಲಿ ಮುಖ್ಯವಾದ ಯಾತ್ರೆಯು. ಆದರೆ ಪೂರ್ವಕಾಲದಲ್ಲಿ ಸುಲಭವಾದ ಮಾರ್ಗಗಳಿಲ್ಲದ್ದರಿಂದ ಈ ಯಾತ್ರೆಯು ಬಹಳ ಕಠಿಣವಾಗಿತ್ತು; ಅಲ್ಲದೆ ಈ ಯಾತ್ರೆಗೆ ಹೋಗುವವರು ತಿರಿಗಿ ಬರುವರೆಂಬ ಭರವಸೆಯಿಲ್ಲದ್ದರಿಂದ ಮನೆತನದ ಎಲ್ಲ ವ್ಯವಸ್ಥೆಯನ್ನು ಮಾಡಿ ಹೋಗುತ್ತಿದ್ದರು. ಬದರೀ ಯಾತ್ರೆಯನ್ನು ಮಾಡಿಕೊಂಡು ಬಂದವರ ದರ್ಶನ ತೆಕ್ಕೊಂಡರೆ ಸಕಲ ಪಾಪಗಳ ಪರಿಮಾರ್ಜನವಾಗುವದೆಂದೂ ಹಳೆಯ ಜನರ ಭಾವನೆಯಾಗಿದ್ದಿತು. ಆದರೆ ಈಗ ಎಲ್ಲ ಕಡೆಗೂ ಉತ್ತಮವಾದ ಮಾರ್ಗಗಳಾಗಿ ಅಲ್ಲಲ್ಲಿ ನದಿಗಳಿಗೆ ಪೂಲುಗಳಾಗಿರುವವು ಅಲ್ಲಲ್ಲಿ ಚಟ್ಟಿಗಳೂ ಅಂಗಡಿಗಳೂ ಇದ್ದು ಅವಶ್ಯವಾಗಿ ಬೇಕಾದ ಎಲ್ಲ ಪದಾರ್ಥಗಳೂ ಸಿಕ್ಕುವವು ಇಲ್ಲಿನ ಸೃಷ್ಟಿಸೌಂದರ್ಯವು ಅತ್ಯಂತ ಮನೋಹರವಾದುದರಿಂದ ಎಲ್ಲರೂ ಈ ಯಾತ್ರೆಯನ್ನು ಮಾಡಬೇಕೆಂದು ಇಚ್ಛಿಸುತ್ತೇನೆ. ಸದ್ಯದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಯಾತ್ರೆಗಳ ಮಹಿಮೆಯೇನೋ ಕಡಿಮೆಯಾಗಿದೆ. ಆದರೂ ಹಿಮಾಲಯದಂಥ ಸುಂದರವಾದ ಪ್ರದೇಶದಲ್ಲಿಯ ಬದರೀ ಕೇದಾರ ಮುಂತಾದ ಯಾತ್ರೆಗಳು ಇನ್ನೂ ಪವಿತ್ರವೆಂದು ಅನೇಕರು ಭಾವಿಸುತ್ತಾರೆ. ಇರಲಿ. ಮೊದಲು ಬದರಿಯ ಯಾತ್ರೆಯ ವರ್ಣನೆ ಮಾಡಲುಪಕ್ರಮಿಸುವೆನು.

ಬದರೀ ಯಾತ್ರೆಯ ಸಾಮಾನ್ಯ ವಿವೇಚನೆ

ಹಿಂದೂ ಜನರಿಗೆ ಅತ್ಯಂತ ಪವಿತ್ರವಾದ ಸಪ್ತಪುರಿಗಳಲ್ಲಿ ಹರಿದ್ವಾರವು—ಮಾಯಾಪುರಿಯು ಒಂದಾಗಿದೆ. ಇದಕ್ಕೆ ಹರಿದ್ವಾರ, ಹರಿದ್ವಾರ ಮತ್ತು ಗಂಗಾದ್ವಾರವೆಂದೂ ಹೆಸರಿರುವುದು. ಬದರಿ, ಇದು ಕೇದಾರ, ಗಂಗೋತ್ರಿಗಳದ್ವಾರವಾಗಿರುವುದರಿಂದ ಇದಕ್ಕೆ ಬೇರೆ ಬೇರೆ ಹೆಸರು ಬಂದಿರುವವು.

ಹರಿದ್ವಾರ ಅರ್ಥಾತ್ ಮಾಯಾಪುರಿ.

ಬದರೀ ಯಾತ್ರೆಯು ಇಲ್ಲಿಂದಲೇ ಪ್ರಾರಂಭವಾಗುವದಲ್ಲದೆ ಪಾವನ ಗಂಗೆಯೂ ಇಲ್ಲಿಂದಲೇ ಬೈಲು ಪ್ರದೇಶ ಸೇರುವಳು. ಈ ಸ್ಥಾನವು ಬಹಳ ಪವಿತ್ರವಾಗಿದ್ದು ಇಲ್ಲಿನ ಸೃಷ್ಟಿಸೌಂದರ್ಯವೂ ಮನೋಹರವಾಗಿದೆ. ಇಲ್ಲಿ ಮದ್ಯ, ಮಾಂಸಗಳ ಅಂಗಡಿಗಳು ಒಂದೂ ಇಲ್ಲ; ಪರದೇಶಿಯ ಸಕ್ಕರೆ ಸಿಕ್ಕುವುದೂ ಅಪರೂಪ. ಮುಸಲಮಾನರಿಗೆ ಕಾಯಂವಾಗಿ ಇಲ್ಲಿರಲು ಸ್ಥಳದೊರೆಯುವದಿಲ್ಲ, ಗಂಗೆಯ ದಂಡೆಯ ಮೇಲಿರುವ ಹರಿಯ ಪಾವಟಿಗೆಯ (ಪ್ಲ್ಯಾಟಫಾರ್ಮ) ಹತ್ತರ ಬರಲು ಸಹ ಅಪ್ಪಣೆಯಿಲ್ಲ. ಕೆಳಗೆ ಬಂದು ನೀರಲ್ಲಿಳಿದರೆ ಶಿಕ್ಷೆಗೆ ಪಾತ್ರರಾಗುತ್ತಾರೆ. ಇದೆಲ್ಲ ಮುನಿಸಿಪಾಲಿಟಿಯ ವ್ಯವಸ್ಥೆಯು.

ಇಲ್ಲಿ ವಿಶೇಷ ಗುಡಿಗುಂಡಾರಗಳಿರದೆ ನೈಸರ್ಗಿಕ ಸೌಂದರ್ಯವೇ ಹೆಚ್ಚಾಗಿರುವುದು. ಇಲ್ಲಿಂದ ಹಿಮಾಲಯದ ಶಿಖರಗಳು ಬಹಳ ಮನೋಹರವಾಗಿ ಕಾಣುವುವು. ಅತ್ಯಂತ ವೇಗದಿಂದ ಕೆಳಗೆ ಹರಿದು ಬರುವ ಗಂಗೆಯ ಪ್ರವಾಹವೂ ರಮ್ಯವಿದೆ. ಆದರೂ ಗುರುಕುಲ, ಋಷಿಕುಲ, ಆಯುರ್ವೇದ ಕಾಲೇಜ, ಮಹಾವಿದ್ಯಾಲಯಗಳಂಥ ಕೆಲ ಸಂಸ್ಥೆಗಳೂ, ಗುರುಮಂಡಲ, ಯೋಗಾಶ್ರಮಗಳಂಥ ಸಾಧುಸನ್ಯಾಸಿಗಳು ವಾಸಿಸತಕ್ಕ ಸಾಧಕಾಶ್ರಮಗಳು ಮನೋಹರವಾಗಿವೆ. ಹಿಂದುಸ್ಥಾನದ ಎಲ್ಲ ಭಾಗಗಳಿಂದ ಪ್ರತಿವರ್ಷ ಲಕ್ಷಾವಧಿ ಜನರು ಇಲ್ಲಿಗೆ ಬರುವರು. ಹರಿದ್ವಾರಕ್ಕೆ ಮುಂಬಯಿಯಿಂದ ೧೬-೧-೬, ಮದ್ರಾಸದಿಂದ ೨೩-೮-೦, ಕಲಕತ್ತೆಯಿಂದ ೯-೨-೦, ಕರಾಚಿಯಿಂದ ೧೧-೯-೦, ಹುಬ್ಬಳ್ಳಿಯಿಂದ ೧೯-೪-೬ ರೇಲ್ವೆ ಚಾರ್ಜು ಇದೆ. ನಗರದಲ್ಲಿ ಸುರಜಮಲ್ಲ, ಬಿರ್ಲಾ, ಮದ್ರಾಸೀ ಮೊದಲಾದ ಅನೇಕ ಧರ್ಮಶಾಲೆಗಳಿದ್ದು ಬಾಡಿಗೆಯಿಲ್ಲದೆ ಮೂರು ದಿನಗಳಿಂದ ೮ ದಿನಗಳ ವರೆಗೆ ಅಲ್ಲಿಳಿಯಬಹುದು. ಕ್ಷೇತ್ರ ಪುರೋಹಿತರಂತೂ ಸ್ಟೇಶನಕ್ಕೆ ಬಂದು ಬೀಗರಂತೆ ಮನೆಗೆ ಕರೆದೊಯ್ಯುತ್ತಾರೆ. ಇಲ್ಲಿ ಹೆಚ್ಚಾಗಿ ಹಣ ವೆಚ್ಚ ಮಾಡಬೇಕಾಗುವುದು.

ಹರಿದ್ವಾರದಲ್ಲಿ ನೋಡತಕ್ಕ ಮುಖ್ಯ ಸ್ಥಳಗಳು.

ಹರಿಯ ಪಾವಟಿಗೆ (ಹರೀಕಿ ಪೈಢಿ)

ಗಂಗಾಸ್ನಾನಕ್ಕಾಗಿಯೇ ಸಿದ್ಧವಿದ್ದ ಈ ಕ್ಷೇತ್ರಕ್ಕೆ ಬಂದವರೆಲ್ಲ ಮೊದಲು ಬ್ರಹ್ಮಕುಂಡ (ಹರಿಯ ಪಾವಟಿಗೆ) ದಲ್ಲಿ ಸ್ನಾನ ಮಾಡಿ, ಗಂಗಾ ಕಾಲುವೆಯ ಎರಡೂ ಬದಿಗಿರುವ ಪ್ಲಾಟ್‌ಫಾರ್ಮುಗಳ ಮೇಲೆ ಕುಳಿತು ಅನುಷ್ಠಾನ ಮಾಡುವರು. ಮೊದಲು ನೋಡತಕ್ಕ ಸ್ಥಳವೂ ಇದೇ. ಸ್ವಲ್ಪ ದೂರ ದೃಷ್ಟಿ ಚಲ್ಲಿದರೆ ಪರ್ವತದ ಶಿಖರಗಳ ಸಾಲುಗಳು ಒಂದರ ಮೇಲೊಂದು ಕಾಣುತ್ತಿವೆ. ಅದರ ಕೆಳಗಡೆ ಒತ್ತರದಿಂದ ಹರಿದು ಬರುವ ಶುಭ್ರಗಂಗೆಯು ಆಲ್ಹಾದಕರವಾಗಿ ತೋರುವಳು. ಇಲ್ಲಿ ಸಾಯಂಕಾಲ ಅನೇಕ ಸಾಧುಸನ್ಯಾಸಿಗಳ ಪುರಾಣ, ಕೀರ್ತನೆ, ಪ್ರವಚನ, ವ್ಯಾಖ್ಯಾನಗಳು ನಡೆಯುವವಲ್ಲದೆ ಮಂಗಳಾರುತಿಯೂ ಆಗುವುದು. ಆಗ ಸಾವಿರಾರು ಜನರು ನೆರೆಯುತ್ತಾರೆ. ಆದುದರಿಂದ ಯಾತ್ರೆಗೆ ಹೋದವರೆಲ್ಲರೂ ಸಾಯಂಕಾಲದ ಈ ಸುಸಂಧಿಯನ್ನು ಕಳೆದುಕೊಳ್ಳತಕ್ಕದ್ದಲ್ಲ.

ಕುಂಭಮೇಳೆಯ ದೃಶ್ಯ

೧೯೩೮ನೇ ಇಸ್ವಿಯಲ್ಲಿ ಕುಂಭಮೇಳೆಯ ಕಾಲಕ್ಕೆ ೭೫ ಲಕ್ಷ ಜನರು ಇಲ್ಲಿ ನೆರೆದಿದ್ದರು. ಈ ಮೇಳೆಯ ಕಾಲಕ್ಕೆ ಇದೊಂದೇ ಸ್ಥಳದಲ್ಲಿ ಒಂದೇ ಕಾಲಕ್ಕೆ ಸ್ನಾನ ಮಾಡಬೇಕೆಂಬ ಮೂಢ ರೂಢಿಯು ಬಿದ್ದಿದೆ. ಆಗ ಕೂಡಿದ ಈ ಜನಜಂಗುಳಿಯಲ್ಲಿ ಸುಮಾರು ೨೫೦ ಜನರು ಹಿಚುಕಲ್ಪಟ್ಟು ಮರಣ ಹೊಂದಿದರು. ಆಗ ಒಂದು ತಿಂಗಳಿಂದ ೧೫-೨೦ ನಿಮಿಷಗಳಿಗೊಂದರಂತೆ ಗಾಡಿಗಳು ಬಂದು ಹೋಗುತ್ತಿದ್ದುವು. ಸರಕಾರದವರೂ ಚೆನ್ನಾಗಿ ವ್ಯವಸ್ಥೆ ಇಟ್ಟಿದ್ದರು. ಆದರೂ ಗದ್ದಲ ವಿಶೇಷವಾಗಿ ೨೫೦ ಜನರಿಗೆ ಆತ್ಮಾರ್ಪಣೆ ಮಾಡಬೇಕಾಯಿತಲ್ಲದೆ ಅನೇಕರಿಗೆ ಗಾಯವಾಯಿತು. ಯೋಗಿದೇವನು ಆಗ ಬಂದ ಅನೇಕ ಸಾಧುಸನ್ಯಾಸಿಗಳಲ್ಲೊಬ್ಬನು. ಈ ತೇಜಸ್ವಿ ಪುರುಷನ ಸಂಗಡ ನಾನು ೩ ದಿವಸವಿದ್ದೆನು. ಅವನಿಗೆ ಅನೇಕ ಸಿದ್ಧಿಗಳು ಪ್ರಾಪ್ತವಾಗಿದ್ದರೂ ಪ್ರಕಟ ಮಾಡುತ್ತಿದ್ದಿಲ್ಲ. ತಾನು ತಿಬೇಟದಲ್ಲಿ ೧೨ ವರ್ಷ ಇದ್ದ ಸಂಗತಿಯನ್ನೂ ಕೆಲವು ಅಭ್ಯಾಸದ ಕ್ರಿಯೆಗಳನ್ನೂ ಹೇಳಿದನು. ಇವನು ಗಂಗೆಯ ಪ್ರವಾಹದ

ವಿರುದ್ಧ ಸಹಜವಾಗಿ ಈಜುವದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಈ ಸ್ಥಾನದ ಹೊರ್ತು ಹರಿದ್ವಾರದಲ್ಲಿ ಕುಶಾವರ್ತ (ಪಿಂಡಾದಿಗಳನ್ನು ಕೊಡುವ ಸ್ಥಳ), ಬಿಲ್ಲಕೇಶ್ವರ, ಶ್ರವಣನಾಥಮಂದಿರ, ಶಂಕರಮಠ ಮತ್ತು ಆದರ ನಾಲ್ಕು ಗುಡಿಗಳು, ಗಂಗೆಯ ಗುಡಿಗಳು, ನದಿಯ ಎರಡನೇ ದಂಡೆಗೆ ನೀಲಧಾರಾ ಮತ್ತು ಪರ್ವತಶಿಖರದಲ್ಲಿ ಚಂಡಿ ಗುಡಿಗಳೂ ಅವಶ್ಯವಾಗಿ ನೋಡುವಂಥವಿರುತ್ತವೆ. ಇಲ್ಲಿಂದ ಕಾಣುವ ಹಿಮಶಿಖರಗಳ ಅಪೂರ್ವ ಶೋಭೆಯು ಅತಿಶಯ ಆನಂದದಾಯಕವಾಗಿದೆ. ಹರಿದ್ವಾರದಿಂದ ೧॥ ಮೈಲಿನ ಮೇಲೆ 'ಕನಖಲ್ಲಿ'ನಲ್ಲಿ ಅನೇಕ ಗುಡಿಗಳಿವೆ.

**ಕನಖಲತೀರ್ಥ**

ಕನಖಲತೀರ್ಥವು ವಿಶಾಲವಾದ ಬೈಲಿನಲ್ಲಿದ್ದು ಇಲ್ಲಿ ಗಂಗೆಯ ಪ್ರವಾಹವೂ ವಿಸ್ತಾರವಾಗಿದೆ. ಇಲ್ಲಿಯೇ ದಕ್ಷಪ್ರಜಾಪತಿಯು ಯಜ್ಞ ಮಾಡಿದನೆಂದು ಆಖ್ಯಾಯಿಕೆಯಿದೆ. ಇಲ್ಲಿ ದಕ್ಷೇಶ್ವರ, ರಾಧಾಕೃಷ್ಣ, ರಾಮಜಾನಕಿ, ಮೋಟೇಶ್ವರ ಮತ್ತು ವೇದವ್ಯಾಸರ ಗುಡಿಗಳು ಪ್ರೇಕ್ಷಣೀಯವಾಗಿವೆ. ದೊಡ್ಡ ಪೇಟೆಯೂ ಅನೇಕ ಧರ್ಮಶಾಲೆಗಳೂ ಇದ್ದು ಗುರುಕುಲದ ಒಂದು ಶಾಲೆಯೂ ಉಂಟು. ಹರಿದ್ವಾರ, ಕನಖಲತೀರ್ಥ, ಮತ್ತು ಜ್ವಾಲಾಪುರಗಳ ಮಧ್ಯದಲ್ಲಿಯೇ ಗುರುಕುಲ, ಋಷಿಕುಲ, ಮಹಾವಿದ್ಯಾಲಯಗಳಂಥ ಪ್ರಸಿದ್ಧ ಶಿಕ್ಷಣ ಸಂಸ್ಥೆಗಳೂ, ಸಾಧುಸನ್ಯಾಸಿಗಳು ವಾಸ ಮಾಡುವಂಥ ಗುರುಮಂಡಲ, ಯೋಗಾಶ್ರಮ, ವಾನಪ್ರಸ್ಥಾಶ್ರಮಗಳಂಥ ಅನೇಕ ಆಶ್ರಮಗಳೂ ಪ್ರೇಕ್ಷಣೀಯವಾಗಿವೆ. ಮಾಯಾಪುರದಲ್ಲಿ ಗಂಗೆಯ ಕಾಲುವೆ, ಮಾಯಾದೇವಿಯ ಮಂದಿರ ನೋಡತಕ್ಕಂಥವಿವೆ. ಈ ಭಾಗದಲ್ಲಿ ಅಕ್ಕಿ, ಬೇಳೆ, ಉಪ್ಪು ಸಹ ತೂಕಮಾಡಿಕೊಡುವ ರೂಢಿಯಿದೆ. ಈ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆನು.

**ಗುರುಕುಲ**

ಈ ಆಶ್ರಮವು ಹಿಂದುಸ್ತಾನದಲ್ಲೆಲ್ಲ ಪ್ರಸಿದ್ಧವಾಗಿದೆ. ಹುತಾತ್ಮಾ ಸ್ವಾಮಿ ಶ್ರದ್ಧಾನಂದರು ಇದರ ಸ್ಥಾಪಕರು. ಇದರ ಮೊದಲಿನ ಕಟ್ಟಡವು ನೆರೆಹಾವಳಿಯಿಂದ ೧೯೨೪ ರಲ್ಲಿ ನೆಲಸಮವಾದುದರಿಂದ ೧೯೨೦ರ ಲ್ಲಿ ಕನಖಲ ಜ್ವಾಲಾಪೂರಗಳ ನಡುವೆ ಮತ್ತೊಂದು ಕಟ್ಟಡವನ್ನು ಕಟ್ಟಿಸಿರುವರು. ಇದು ಹರಿದ್ವಾರದಿಂದ

ಎರಡು ಮೈಲಿನ ಮೇಲಿದೆ. ಈ ಭವ್ಯವಾದ ಕಟ್ಟಡದಲ್ಲಿ ಯಜ್ಞ ಮಂಟಪ, ಭೋಜನಾಲಯ, ವಸತಿಗೃಹ, ಪುಸ್ತಕಾಲಯ, ಕಾಲೇಜ ಮುಂತಾದ್ದರ ಸಲುವಾಗಿ ಬೇರೆ ಬೇರೆ ಕಟ್ಟಡಗಳು ಕಟ್ಟಲ್ಪಟ್ಟಿದ್ದು ಇವೆಲ್ಲ ಪ್ರೇಕ್ಷಣೀಯವಾಗಿವೆ. ಸುತ್ತಲೂ ವಿಶಾಲವಾದ ಬೈಲು ಇದ್ದು ಎದುರಿಗೆ ಗಂಗೆಯ ಕಾಲುವೆ ಇದೆ.

ಗುರುಕುಲದಲ್ಲಿ ಆರರಿಂದ ಹತ್ತು ವರ್ಷಗಳೊಳಗಿನ ಉಪನೀತ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವರು. ಮುಂದೆ ೧೬ ವರ್ಷಗಳ ವರೆಗೆ ವೇದಾಧ್ಯಯನ, ಅರ್ಥಶಾಸ್ತ್ರ, ನೀತಿಶಾಸ್ತ್ರ ಶಾಸ್ತ್ರೀಯ ವಿಷಯ ವ್ಯಾಕರಣ ಮುಂತಾದ ವಿಷಯಗಳಲ್ಲಿ ಶಿಕ್ಷಣ ಕೊಡುವರು. ಆ ಮೇಲೆ ಅವರಿಗೆ ಯೋಗ್ಯತಾಪತ್ರಗಳನ್ನು ಕೊಟ್ಟು ಅಧ್ಯಾಪಕ ಅಥವಾ ಪ್ರಚಾರಕರನ್ನಾಗಿ ನೇಮಿಸಿ ಹೊರಗೆ ಕಳಿಸುತ್ತಾರೆ. ಗುರುಕುಲವು ಆರ್ಯಸಮಾಜದ ವತಿಯಿಂದ ನಡೆದಿದ್ದು ಇಲ್ಲಿ ಎಲ್ಲರಿಗೂ ಒಂದೇ ಪ್ರಕಾರದ ಊಟ ಉಡುಪು ಮತ್ತು ಇತರ ಅವಶ್ಯ ಬೇಕಾಗುವ ಅನುಕೂಲತೆಗಳು ಕೊಡಲ್ಪಡುವವು. ಇಲ್ಲಿ ಶಿಕ್ಷಣ ಪಡೆದು ಹೊರಬೀಳುವವರಿಗೆ ಅಧಿಕಾರಿ, ಸ್ನಾತಕ, ವಾಚಸ್ಪತಿ ಮುಂತಾದ ಬೇರೆ ಬೇರೆ ಪದವಿಗಳನ್ನು ಕೊಡುವರು. ಈ ಸಂಸ್ಥೆಯನ್ನು ಪ್ರತಿಯೊಬ್ಬನು ನೋಡಿಯೇ ತೀರತಕ್ಕದ್ದು. ಇಲ್ಲಿ ಸುಮಾರು ೫೦೦ ರ ವರೆಗೆ ವಿದ್ಯಾರ್ಥಿಗಳಿರುವರು.

ಶಿಕ್ಷಣಕ್ರಮ

ಸನಾತನ ಧರ್ಮದ ಉನ್ನತಿಗಾಗಿ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಇಲ್ಲಿಯೂ ಸಣ್ಣ ಬಾಲಕರನ್ನು ಪ್ರವೇಶ ಮಾಡಿಕೊಂಡು ಅವರು ೨೫ ವರ್ಷದವರಾಗುವವರೆಗೆ ಅವರಿಗೆ ವಿದ್ಯಾಭ್ಯಾಸ ಮಾಡಿಸುವರು. ಇಲ್ಲಿ ಎಲ್ಲ ಹಿಂದುಗಳಿಗೂ ಪ್ರವೇಶವಿರದೆ ಕೇವಲ ತ್ರಿವರ್ಣದವರಿಗೆ ಮಾತ್ರ ಪ್ರವೇಶವಿದೆ. ಗುರುಕುಲವು ಪ್ರಾರಂಭವಾದ ಒಂದೆರಡು ವರ್ಷಗಳಲ್ಲಿಯೇ ಇದು ಪ್ರಾರಂಭವಾಗಿದೆ. ಇದರ ವತಿಯಿಂದ ಒಂದು ಆಯುರ್ವೇದೀಯ ಕಾಲೇಜವು ನಡೆದಿದೆ. ಇಲ್ಲಿ ಮಾತ್ರ ಎಲ್ಲ ವರ್ಣದವರಿಗೂ ಪ್ರವೇಶವುಂಟು. ಇಲ್ಲಿ ನೂಲುವದನ್ನು ಜಮುಖಾನಿ ನೇಯುವದನ್ನು ಮುಂತಾದ್ದನ್ನು ಕಲಿಸಬೇ

ಋಷಿಕುಲ

ಕೆಂದು ನಾನಲ್ಲಿದ್ದಾಗ (೨-೩ ವರ್ಷ) ಪ್ರಯತ್ನಿಸಿದೆನು. ಆದರೆ ಸೆಕ್ರೆಟರಿಗಳಾದ ಕೇದಾರನಾಥಶರ್ಮಾರವರ ಹೊರ್ತಾಗಿ ಬೇರೆ ಯಾರಿಗೂ ಈ ವಿಚಾರಗಳು ಸೇರಲಿಲ್ಲ. ಆದರೂ ನಾನಿರುವ ವರೆಗೆ ಎಷ್ಟೋ ಜನರು ನೂಲಲಿಕ್ಕೆ ಕಲಿತದ್ದಲ್ಲದೆ ಕೆಲವು ಜಮುಖಾನಿಗಳೂ ತಯಾರ ಮಾಡಲ್ಪಟ್ಟವು. ಹಲವು ಜನರು ಗಾಂಧಿ ಆಶ್ರಮದ ಮನುಷ್ಯನೆಂದು ನನ್ನನ್ನು ತುಚ್ಛೀಕರಿಸುತ್ತಿದ್ದರೂ ನಾನು ಹೇಳಿದಂತೆ ನೂಲಲು ನೇಯಲು ಕಲಿತರು. ಆದರೆ ಕಮೀಟಿಯವರೇ ಇದಕ್ಕೆ ವಿರೋಧ ಮಾಡಿದ್ದರಿಂದ ಚರಖಾ ವರ್ಗವನ್ನು ನಿಲ್ಲಿಸಬೇಕಾಯಿತು. ಇದರಿಂದ ಶರ್ಮಾಜಿಯವರಿಗೆ ಮಾತ್ರ ವಿಷಾದವಾಯಿತು. ಇಂದಿಲ್ಲ ನಾಳೆಯಾದರೂ ಈ ಸಮಾಜದವರು ದೇಶದಲ್ಲಿ ನಡೆದ ಪರಿಸ್ಥಿತಿಯ ಕಡೆಗೆ ಲಕ್ಷ ಪೂರೈಸಬಹುದು. ಇಲ್ಲಿ ಸುಮಾರು ೨೫ ಹುಡುಗರಿರುವರು.

**ಜ್ವಾಲಾಪುರ**

ಇದಕ್ಕೆ ಮಹಾವಿದ್ಯಾಲಯವೆಂದೂ ಕರೆಯುವರು. ಇಲ್ಲಿಯ ಶಿಕ್ಷಣಕ್ರಮವು ಗುರುಕುಲದ ಶಿಕ್ಷಣಕ್ರಮದಂತಿದೆ. ಸುಮಾರು ೨೦೦ ವಿದ್ಯಾರ್ಥಿಗಳಿರುವರು. ಇವಲ್ಲದೆ ಇನ್ನೂ ಅನೇಕ ಆಶ್ರಮಗಳು ಪ್ರೇಕ್ಷಣೀಯವಾಗಿವೆ. ಅವುಗಳಲ್ಲಿ ರಾಣೀಪೂರ ಝೂಲಾ ಒಂದಾಗಿದೆ. ಇಲ್ಲಿ ಕೆಳಗೆ ಗಂಗೆಯ ಕಾಲುವೆ, ಅದರ ಮೇಲೆ ಅಡ್ಡವಾಗಿ ಕಾಳೀ ನದಿಯು (× ಕತ್ತರಿಯ ಪ್ರಕಾರ) ಹರಿಯುವಂತೆ ಪೂಲು ಕಟ್ಟಿದ್ದಾರೆ. ಎಲ್ಲಕ್ಕೂ ಮೇಲ್ಗಡೆ ಜನರು ಹೋಗುವ ಮಾರ್ಗವಿದೆ. ಇದು ಜ್ವಾಲಾಪುರದಿಂದ ೩ ಮೈಲು ಅಂತರದ ಮೇಲಿದೆ.

**ಹೃಷೀಕೇಶ (ತಪೋಭೂಮಿ)**

ಹೃಷೀಕೇಶವು ಹರಿದ್ವಾರದಿಂದ ೧೫ ಮೈಲಿನ ಮೇಲಿದೆ. ಈಗ ಇಲ್ಲಿಗೆ ರೇಲ್ವೆ ಆಗಿದ್ದು ಮೋಟಾರು ಟಾಂಗಾ ಮುಂತಾದವುಗಳೂ ದೊರಕುವವು. ಹಿಮಾಲಯದ ಪ್ರವಾಸವನ್ನೆಲ್ಲ ಕಾಲುನಡಿಗೆಯಿಂದಲೇ ಮಾಡಬೇಕೆಂದು ನನ್ನ ಇಚ್ಛೆಯಿದ್ದುದರಿಂದ ನಾನು ನಡೆಯುತ್ತಲೇ ಹರಿದ್ವಾರದಿಂದ ಹೃಷೀಕೇಶಕ್ಕೆ ಹೊರಟೆನು. ಗಂಗೆಯ ದಂಡೆಗೆ ಪರ್ವತ ಕೊರೆದು ಮಾರ್ಗವನ್ನು ಮಾಡಿದ್ದಾರೆ. ಒಂದು ಮೈಲು ಈ ಮಾರ್ಗಕ್ರಮಣ ಮಾಡಿದಮೇಲೆ ಭೀಮಘೋಡಾ ಎಂಬ ಸ್ಥಳವಿದೆ. ಇಲ್ಲಿ ಗುಡ್ಡದ ಕೆಳಗೆ

ಒಂದು ಕುಂಡವೂ ಕೆಲವು ದೇವರ ಮೂರ್ತಿಗಳೂ ಇವೆ. ಮುಂದೆ ಒಂದೆರಡು ಮೈಲು ನಡೆದ ಮೇಲೆ ಗಂಗಾನದಿಯು ಮಾರ್ಗದಿಂದ ದೂರಾಗಿ ಒಂದು ಸಣ್ಣ ಅಡಿವೆಯು ಹತ್ತುವದು. ಮುಂದೆ ೪॥ ಮೈಲಿನ ಮೇಲೆ 'ರಾಯವಾಲಾ' ಎಂಬ ರೇಲ್ವೆ ಸ್ಟೇಶನ್ ಬರುತ್ತದೆ. ಇಲ್ಲಿಂದ ಡೇಹರಾಡೂನ, ಹೃಷೀಕೇಶಗಳಿಗೆ ಮಾರ್ಗಗಳು ಒಡೆದಿವೆ. ಇಲ್ಲಿಂದ ೧॥ ಮೈಲಿನ ಮೇಲೆ 'ಸತ್ಯನಾರಾಯಣ'ವಿದ್ದು ಅಲ್ಲಿ ಒಂದು ಧರ್ಮಶಾಲೆ ಮತ್ತು ಗುಡಿಗಳಿವೆ. ಇಲ್ಲಿಯೇ ಬದರೀಕೇದಾರಕ್ಕೆ ಹೋಗುವ ಸಾಧುಗಳ ಊಟ ಉಪಚಾರಕ್ಕಾಗಿ ಕಾಲಾಕಮಲೀವಾಲಾ ಇವರ ಛತ್ರಗಳಿಗಾಗಿ ಚೀಟಿಗಳನ್ನು ಕೊಡುತ್ತಾರೆ. ಇಲ್ಲಿಂದ ೭ ಮೈಲಿನ ಮೇಲೆ ಹೃಷೀಕೇಶವಿದೆ. ಹೃಷೀಕೇಶವು (ಗರ್ಜನೆಮಾಡುತ್ತ ಹರಿದುಹೋಗುವ) ಗಂಗೆಯ ದಂಡೆಯಲ್ಲಿದ್ದು, ಇಲ್ಲಿ ಮಂದಿರಗಳೂ ಆಶ್ರಮಗಳೂ ಇವೆ. ಹಿಂದಿನ ಪ್ರಕರಣದಲ್ಲಿಯೇ ಈ ಆಶ್ರಮಗಳನ್ನು ವರ್ಣಿಸಿದ್ದಾಗಿದೆ. ಮಂದಿರಗಳಲ್ಲೆಲ್ಲ ಮುಖ್ಯವಾಗಿ ಭರತನ ಗುಡಿಯೇ ನೋಡುವಂಥಾದ್ದಾಗಿದೆ. ಇದರ ಹೊರ್ತು ಲಕ್ಷ್ಮಣ ಶತ್ರುಘ್ನರ ಗುಡಿಗಳೂ ಇವೆ. ಕಲಕತ್ತೆವಾಲಾ, ಕಾಲಾಕಮಲೀವಾಲಾ, ಜಗಾದ್ರಿವಾಲಾ ಮೊದಲಾದ ಅನೇಕ ಧರ್ಮಶಾಲೆಗಳೂ ಸಾಧುಗಳಿಗೆ ಛತ್ರಗಳೂ ಇವೆ. ಇಲ್ಲಿ ಉತ್ತಮ ಪೇಟೆಯಿದ್ದು ಎಲ್ಲ ಸಾಮಾನುಗಳು ಸಿಗುತ್ತವೆ.

ಹೃಷೀಕೇಶದಿಂದ ಮುಂದಿನ ಯಾತ್ರೆ ಪ್ರಾರಂಭವಾಗುತ್ತದೆ. ಇಲ್ಲಿಂದ ಒಂದು ಮೈಲಿನ ಮೇಲಿರುವ "ಮುನೀಕೀ ಕೀಲೆ"ಯಿಂದ

ಲಕ್ಷ್ಮಣಝೂಲಾ

ಎಡಕ್ಕೆ ನರೇಂದ್ರನಗರದ ಮೇಲಿಂದ ಗಂಗೋತ್ರಿಗೂ, ಬಲಕ್ಕೆ ಲಕ್ಷ್ಮಣಝೂಲಾದ ಮೇಲಿಂದ ಕೇದಾರ ಬದರಿಗೂ ಮಾರ್ಗಗಳು ಹೋಗಿವೆ. ಹೆಚ್ಚಾಗಿ ಇದೇ ಭಾಗದಲ್ಲಿ ಆಶ್ರಮಗಳಿವೆ. ಸ್ವರ್ಗಾಶ್ರಮಕ್ಕೆ ಹೋಗಲು ನದಿಯನ್ನು ದಾಟುವ ಪಕ್ಕೆ ಪುಕ್ಕಟೆ ನಾವುಗಳಿರುತ್ತವೆ. ಈ ಮಾರ್ಗದಿಂದ ಹೋದರೆ ಲಕ್ಷ್ಮಣಝೂಲಾ-ಪೂಲು-ಹತ್ತುವದಿಲ್ಲ. ನದಿಯನ್ನು ದಾಟಿದ ರಾಮಾಶ್ರಮದಿಂದ ಹಾಗೇ ನೆಟ್ಟಗೆ ಹೋಗಿ ಸ್ವಲ್ಪ ಏರಿಯನ್ನು ಹತ್ತಿದ

ಮೇಲೆ ಲಕ್ಷ್ಮಣನ ಗುಡಿಯೂ, ಕೆಳಗೆ ಸ್ಪ್ರಿಂಗಿನಿಂದ ಹೊಯ್ದಾಡುವ "ಲಕ್ಷ್ಮಣಝೂಲಾ''- ಪೂಲೂ ಹತ್ತುವವು. ಈ ಪೂಲು ೧೯೨೪ ರಲ್ಲಿ ಮಹಾಪೂರು ಬಂದಾಗ ತೇಲಿಹೋಗಿತ್ತು. ಆಪರೆ ೧೯೨೯ ರಲ್ಲಿ ಪುನಃ ಇದನ್ನು ತಯಾರಮಾಡಿರುವರು. ಈ ಪೂಲಿಗೆ ನಡುವೆ ಕಂಬಗಳಿರದೆ, ಎರಡನೇ ದಂಡೆಗಿರುವ ಗೋಡೆಗಳ ಆಧಾರದ ಮೇಲೆಯೇ ಕಬ್ಬಿಣದ ಸರಪಳಿಗಳನ್ನು ನಿಲ್ಲಿಸಿದ್ದು ಆದರ ಮೇಲೆ ಸಳಿಗಳನ್ನಿಳಬಿಟ್ಟಿದ್ದಾರೆ. ಕೆಳಗೆ ಹಲಿಗೆಗಳನ್ನು ಜೋಡಿಸಿದ್ದಾರೆ. ಇದರ ಮೇಲಿಂದ ದನಕರುಗಳು ಸಹ ದಾಟಿ ಹೋಗಬಹುದು. ಇಂಥ ಪೂಲುಗಳು ಹಿಮಾಲಯದಲ್ಲಿ ಅನೇಕವಿದ್ದರೂ ಹಿಂದುಸ್ಥಾನದ ಇತರ ಭಾಗಗಳಲ್ಲೆಲ್ಲಿಯೂ ಇಲ್ಲ. ಪೂಲು ದಾಟಿದ ಕೂಡಲೆ ಎದುರಿಗೆ 'ಮಹರ್ಷಿಕುಲ' ಆಶ್ರಮವಿದೆ. ಅಲ್ಲಿ ಕೆಲ ಬಡ ವಿದ್ಯಾರ್ಥಿಗಳು ವೇದಾಧ್ಯಯನ ಮಾಡುತ್ತಾರೆ. ಈ ಸ್ಥಾನವು ಹೃಷೀಕೇಶದಿಂದ ಎರಡು ಮೈಲಿನ ಮೇಲಿದೆ. ಇದರ ಸಮೀಪದಲ್ಲಿಯೇ ಸ್ವರ್ಗಾಶ್ರಮವಿದೆ.

ಗರುಡಚಟ್ಟಿ

ಗಂಗೆಯ ಎಡದಂಡೆಗುಂಟ ಪರ್ವತದ ಮಧ್ಯದೊಳಗಿಂದ ಮುಂದಿನ ಮಾರ್ಗವು ಹೋಗಿದ್ದು ೨ ಮೈಲಿನ ಮೇಲೆ ಕಾಲಾಕಮಲೀವಾಲಾ ಇವರ ಬಾಳೆಯ ತೋಟವೂ ಗರುಡಚಟ್ಟಿಯೂ ಬರುತ್ತವೆ. ಇಲ್ಲಿ ಧರ್ಮಶಾಲೆಯೂ ಅಂಗಡಿಯೂ ಇದ್ದು ಗರುಡನ ಗುಡಿಯಿದೆ. ಮೇಲ್ಗಡೆಗೆ ತೋಟದ ಮಧ್ಯದಲ್ಲಿ ವಿದ್ಯಾರ್ಥಿಗಳಿಗಿರುವದಕ್ಕಾಗಿ ೬-೩ ಕುಟಿರಗಳಿದ್ದು ಅಲ್ಲಿಂದ ಸುತ್ತಲೂ ಕಾಣುವ ಸ್ವರ್ಗೀಯ ದೃಶ್ಯವು ಬಹು ರಮಣೀಯವಾಗಿದೆ.

ಸೇಮಲಚಟ್ಟಿ

ಗರುಡಚಟ್ಟಿಯಿಂದ ೨। ಮೈಲಿನ ಮೇಲೆ ಸೇಮಲಚಟ್ಟಿಯಿದೆ. ಇಲ್ಲಿ ಉತ್ತಮ ನೀರಿನ ಝುರಿಯೂ ಕೆಲವು ಅಂಗಡಿಗಳೂ ಇವೆ. ಇಲ್ಲಿಂದ ೩। ಮೈಲಿನ ಮೇಲೆ ಗೂಲರಚಟ್ಟಿಯಿದ್ದು ನದಿಯ ಆಚೆದಂಡೆಗೆ ಬೈರಾಘಡಾ ಎಂಬ ಹಳ್ಳಿಯಿದೆ. ಅದರಂತೆ ೫॥ ಮೈಲಿನ ಮೇಲೆ ಮೋಹನೀಚಟ್ಟಿಯೂ ೮ ಮೈಲಿನ ಮೇಲೆ ಬಿಜನೀಚಟ್ಟಿಯೂ ಇವೆ.

**ಬಿಜನೀಚಟ್ಟಿ**

ಇಲ್ಲಿ ಮೇಲ್ಮಾಳಿಗೆಗಳುಳ್ಳ ನಾಲ್ಕೈದು ಅಂಗಡಿಗಳಿವೆ. ಒಂದು ಸರಕಾರೀ ಧರ್ಮಶಾಲೆಯಿದೆ. ಉತ್ತಮ ನೀರಿನ ಎರಡು ಝರಿಗಳಿದ್ದು ಕೆಲವು ಮಾವಿನ ಮರಗಳಿವೆ. ಇಲ್ಲಿಂದ ೪॥ ಮೈಲಿನ ಮೇಲೆ ಕುಂಡಚಟ್ಟಿಯೂ, ೬ ಮೈಲಿನ ಮೇಲೆ ಬಂದರಚಟ್ಟಿಯೂ ಇವೆ. ಬಿಜನಿಯಿಂದ ೨ ಮೈಲಿನ ಮೇಲೆ ಸಾಧಾರಣ ಏರಿಯಿದೆ. ಅಲ್ಲಿಂದ ಹಿವುಲ ಮತ್ತು ಗಂಗಾದ ನಡುವಿನ ಗುಡ್ಡದ ತುದಿಯ ಮೇಲಿಂದ ಮಾರ್ಗವು ಹೋಗಿದೆ. ಮೇಲೆ ಏರಿದಾಗ ನದಿಗಳು ಸಣ್ಣ ಕಾಲುವೆಗಳಂತೆ ಕಾಣುತ್ತವೆ. ಕುಂಡಚಟ್ಟಿಯು ಬಹಳ ತಗ್ಗಿನಲ್ಲಿದೆ.

**ಬಂದರಚಟ್ಟಿ**

ಇಲ್ಲಿ ಎರಡು ಹಳೇ ಧರ್ಮಶಾಲೆಗಳಿವೆ. ನಂದಗಾಂವಿನ ಕೆಲವು ಅಂಗಡಿಗಳು ಇವೆ. ಇದು ಇಳಿಯಲಿಕ್ಕೆ ಯೋಗ್ಯ ಸ್ಥಳವಿದ್ದು ಗಂಗೆಯ ದಂಡೆಯ ಮೇಲಿರುತ್ತದೆ. ನೀರಿನ ಸಲುವಾಗಿ ನದಿಗೆ ಹೋಗಬೇಕು. ಇಲ್ಲಿಂದ ೩। ಮೈಲಿನ ಮೇಲೆ ಮಹಾದೇವಚಟ್ಟಿಯಿದೆ.

**ಮಹಾದೇವಚಟ್ಟಿ**

ಇಲ್ಲಿ ನಾಲ್ಕಾರು ಅಂಗಡಿಗಳೂ ಐದಾರು ಹುಲ್ಲಿನ ಚಪ್ಪರಗಳೂ ಇದ್ದು ಗುಡ್ಡದ ಮೇಲೆ ಮಹಾದೇವನ ಗುಡಿಯಿದೆ. ಈ ಗುಡಿಗೆ ೬೦ ಪಾವಟಿಗೆಗಳಿವೆ. ಇಲ್ಲಿಂದ ೧। ಮೈಲಿನ ಮೇಲೆ ಒಂದು ದೊಡ್ಡ ಝರಿಯೂ, ೧॥ ಮೈಲಿನ ಮೇಲೆ ಗರುಡನ ಮೂರ್ತಿಯೂ, ಎರಡು ಗುಹೆಗಳೂ ಇವೆ. ಇಲ್ಲಿಂದ ೪ ಮೈಲುಗಳ ಮೇಲೆ ಮಾಲೋಚಟ್ಟಿ ಹಾಗು ೬॥ ಮೈಲಿನ ಮೇಲೆ ಕಂಡಕಿಚಟ್ಟಿಯೂ ಇವೆ.

**ಕಂಡಕಿಚಟ್ಟಿ**

ಈ ಚಟ್ಟಿಯ ಹತ್ತರ ದೊಡ್ಡದೊಂದು ಝರಿಯಿದ್ದು ಬಾಳೀ ಮಾವುಗಳ ಗಿಡಗಳಿವೆ. ಊರಲ್ಲಿ ಅನೇಕ ಮನೆಗಳಿವೆ. ಇಳಿದುಕೊಳ್ಳಲು ಉತ್ತಮ ವ್ಯವಸ್ಥೆಯಿದೆ. ಇಲ್ಲಿಂದ ೨॥ ಮೈಲು ಹೋದಮೇಲೆ ೧॥ ಮೈಲು ಕಠಿನವಾದ ಗುಡ್ಡದ ಏರಿಯು ಪ್ರಾರಂಭವಾಗುವದು. ಶಿಖರವನ್ನು ಮುಟ್ಟಿ ಅರ್ಧ ಮೈಲಿನಷ್ಟು ಕೆಳಗಿಳಿದ ಮೇಲೆ ವ್ಯಾಸಗಂಗಾದ ಪೂಲು ಹತ್ತುವದು. ಇಲ್ಲಿ ಎಲ್ಲ

ದಾರಿಗಳು ಒಡೆದಿವೆ. ಬಲಗಡೆಯ ದಾರಿಯು ಬಾಂಗಘಾಟಿನ ಮೇಲಿಂದ ನಿಜಾಬಾಬಾದಕ್ಕೆ ಹೋಗಿದೆ; ಎಡಗಡೆಯ ದಾರಿಯು ವ್ಯಾಸಚಟ್ಟಿಗೆ ಹೋಗಿದೆ.

ಇಲ್ಲಿಂದ ಅರ್ಧ ಮೈಲಿನ ಮೇಲೆ ವ್ಯಾಸಮಂದಿರವೂ ಒಂದು ಸರಕಾರೀ ಧರ್ಮಶಾಲೆಯೂ ಇವೆ. ಇದು ವ್ಯಾಸಗಂಗಾ ಹಾಗೂ ಭಾಗೀರಥಿಗಳ ಸಂಗಮಸ್ಥಾನವು. ಇದರ ಬದಿಯಲ್ಲಿ ದೊಡ್ಡ ಬೈಲು ಇದೆ. ಇಲ್ಲಿಂದ ೨॥ ಮೈಲಿನ ಮೇಲೆ ಭಾಲೂರಿಚಟ್ಟಿ, ೫ ಮೈಲಿನ ಮೇಲೆ ಉಮರಾಸುಚಟ್ಟಿ, ೭ ಮೈಲಿನ ಮೇಲೆ ಪಾಂಡಚಟ್ಟಿ ಇವೆ. ಇಲ್ಲಿ ಅನಂತರಾಮ ಪಂಡಾನ ಮಂದಿರ ಧರ್ಮಶಾಲೆಗಳಿವೆ. ವ್ಯಾಸಚಟ್ಟಿಯಿಂದ ೯ ಮೈಲಿನ ಮೇಲೆ- ಹೃಷೀಕೇಶದಿಂದ ೪೨॥ ಮೈಲುಗಳ ಮೇಲೆ ದೇವಪ್ರಯಾಗವಿದೆ. ಈ ಮಾರ್ಗದಲ್ಲಿ ಹತ್ತುವ ಗ್ರಾಮಗಳಲ್ಲಿ ಇದೇ ಮೊದಲನೆಯ ದೊಡ್ಡ ಗ್ರಾಮವು. ವ್ಯಾಸಚಟ್ಟಿಯಿಂದ ಇಲ್ಲಿಗೆ ಬರುವಾಗ ಬಲಕ್ಕೆ ಗುಡ್ಡದ ಮೇಲೆ ೬-೭ ಸಣ್ಣ ಹಳ್ಳಿಗಳಿವೆ.

ವ್ಯಾಸಚಟ್ಟಿ

ದೇವಪ್ರಯಾಗವು ಭಾಗೀರಥಿ ಮತ್ತು ಅಲಕನಂದೆಗಳ ಸಂಗಮಸ್ಥಾನದಲ್ಲಿದ್ದು ಪಂಚಪ್ರಯಾಗಗಳಲ್ಲಿ ಒಂದಾಗಿದೆ. ಅಲಕನಂದೆಯ ಬಲದಂಡೆಗೆ ಟಹರೀ ರಾಜ್ಯವೂ; ಎಡದಂಡೆಗೆ ಇಂಗ್ಲಿಶರ ಸೀಮೆಯೂ ಇದೆ. ನದಿಯನ್ನು ದಾಟಲು ಜೋತಾಡುವ ಪೂಲು ಇದೆ. ಪೋಸ್ಟ ಆಫೀಸ, ಸರಕಾರೀ ಧರ್ಮಶಾಲೆ ಮತ್ತು ನೂರಾರು ಮನೆಗಳುಂಟು. ಪೇಟೆಯಲ್ಲಿ ಎಲ್ಲ ಸಾಮಾನುಗಳು ಸಿಗುತ್ತವೆ. ರಘುನಾಥಮಂದಿರ, ಕ್ಷೇತ್ರಪಾಲಮಂದಿರ, ನೈತಾಳಶಿಲಾ, ಇಂದ್ರದ್ಯುಮ್ನ, ಬಿಲ್ವತೀರ್ಥ, ಭರತಮಂದಿರ ಮುಂತಾದವುಗಳು ಪ್ರೇಕ್ಷಣೀಯವಾಗಿವೆ. ಭಾಗೀರಥಿಯ ಉತ್ತರ ದಂಡೆಗುಂಟ ಟಹರಿಗೆ ಹೋಗುವ ಮಾರ್ಗವಿದೆ. ಬದರೀನಾರಾಯಣನ ಪಂಡಾರ (ಪುರೋಹಿತ) ಜನರು ಇಲ್ಲಿ ವಾಸಿಸುತ್ತಾರೆ. ಇಲ್ಲಿಂದ ೧೨೪ ಮೈಲಿನ ಮೇಲೆ ಗಂಗೋತ್ರಿಯುಂಟು. ಹೃಷೀಕೇಶದಿಂದ ಇಲ್ಲಿಗೆ ಬರುವ ಮಾರ್ಗಗಳಲ್ಲಿರುವ ಲಕ್ಷ್ಮಣಝೂಲಾ ಮುಂತಾದ

ದೇವಪ್ರಯಾಗ
(ಸ. ಸ. ೨೨೬೦ ಫೂಟು)

ಆರ ಸ್ಥಳಗಳಲ್ಲಿ ಮಾತ್ರ ಗಂಗಾಸ್ನಾನಕ್ಕೆ ಅನುಕೂಲವಿದೆ. ಇಲ್ಲಿಂದ ಕೇದಾರ-ಬದರೀ ಯಾತ್ರೆಗೆ ಹೋಗುವವರಿಗೆ ಭಾಗೀರಥಿಯು ಸಿಗುವದಿಲ್ಲ. ಮುಂದಿನ ಮಾರ್ಗವೆಲ್ಲ ಅಲಕನಂದಾ ನದಿಯ ದಂಡೆಗುಂಟ ಹೋಗಿದೆ. ಇಲ್ಲಿ ಪಿತೃಗಳಿಗೆ ಪಿಂಡಾದಿಗಳನ್ನು ಕೊಡುತ್ತಾರೆ. ಇಲ್ಲಿಂದ ೨॥ ಮೈಲುಗಳ ಮೇಲೆ ಗೋವಿಂದಕೋಠಿ, ೭। ಮೈಲುಗಳ ಮೇಲೆ ರಾಣೀಬಾಗಚಟ್ಟಿಗಳಿರುತ್ತವೆ. ದಾರಿಯಲ್ಲಿ ಹತ್ತುವ ಸಣ್ಣ ಸಣ್ಣ ಪ್ರವಾಹಗಳಿಗೆಲ್ಲ ಪೂಲುಗಳನ್ನು ಕಟ್ಟಿದ್ದಾರೆ.

**ರಾಣೀಬಾಗಚಟ್ಟಿ** ಇಲ್ಲ ೩-೪ ಅಂಗಡಿಗಳೂ ಇಳಕೊಳ್ಳಲು ಚಟ್ಟಿಗಳೂ ಇವೆ. ಅನೇಕ ವರ್ಷಗಳ ಹಿಂದೆ ಈ ಚಟ್ಟಿಯಲ್ಲಿಯ ಒಂದು ತೋಟವು ನದಿಯ ಪ್ರವಾಹದಿಂದ ಹರಿದು ಹೋಯಿತೆಂದು ಹೇಳುತ್ತಾರೆ. ಇಲ್ಲಿಂದ ೨॥ ಮೈಲುಗಳ ಮೇಲೆ ರಾಮಪುರಚಟ್ಟಿಯೂ, ೫॥ ಮೈಲುಗಳ ಮೇಲೆ ಭಗವಾನ್ ಚಟ್ಟಿಯೂ ಉಂಟು. ಭಗವಾನ್ ಚಟ್ಟಿಯಲ್ಲಿ ಉತ್ತಮವಾದ ಅಂಗಡಿಗಳುಂಟು. ಇಲ್ಲಿಂದ ೨॥ ಮೈಲುಗಳ ಮೇಲೆ ಭೀಲೇಶ್ವರ ಮಂದಿರವಿದೆ.

**ಭೀಲೇಶ್ವರ** ಭೀಲೇಶ್ವರವು ಅರ್ಜುನ ಮತ್ತು ಮಹಾದೇವರು ಯುದ್ಧ ಮಾಡಿದ ಸ್ಥಳವೆಂದು ಆಖ್ಯಾಯಿಕೆ. ಇಲ್ಲಿದ್ದ ಶಿವಲಿಂಗದ ದರ್ಶನ ತೆಗೆದುಕೊಂಡು ಮುಂದಕ್ಕೆ ಸಾಗಬೇಕು. ರಾಮಪುರ ಚಟ್ಟಿಯಿಂದ ಇಲ್ಲಿಯವರೆಗೆ ಸ್ವಲ್ಪ ಜೈಲುಂಟು. ಇಲ್ಲಿಂದ ೨॥ ಮೈಲುಗಳ ಮೇಲೆ ಶ್ರೀನಗರ (ಬ್ರಿಟಿಶ್‌ಗಢವಾಲದ ಮುಖ್ಯ ಪಟ್ಟಣ) ವು ಹತ್ತುವದು.

**ಶ್ರೀನಗರ** ಮಹಾರಾಜಾ ಕೀರ್ತಿಶಾಹ (ಟಿಹರಿ) ಇವರು ಈ ನಗರವನ್ನು ಸ್ಥಾಪಿಸಿದ್ದು ಸದ್ಯಕ್ಕೆ ಇದು ಬ್ರಿಟಿಶ್‌ಗಢವಾಲದ ಮುಖ್ಯ ನಗರವಾಗಿದೆ. ಇಲ್ಲಿ ಧರ್ಮಶಾಲೆ, ಪೋಸ್ಟ್ಆಫೀಸ, ತಾರಆಫೀಸ, ದವಾಖಾನೆಗಳುಂಟು. ಈ ನಗರವೇ ಈ ಪ್ರದೇಶದಲ್ಲೆಲ್ಲ ದೊಡ್ಡ ಪಟ್ಟಣವಾಗಿದೆ. ಇಲ್ಲಿಯ ಜನಸಂಖ್ಯೆಯು ಸುಮಾರು ೨೦೦೦. ಉತ್ತಮ ಮನೆ ಪೇಟೆಗಳಿಂದ ಈ ನಗರಕ್ಕೆ ವಿಶೇಷ ಶೋಭೆಯುಂಟಾಗಿದೆ. ಕಮ

ಲೇಶ್ವರ, ಕಿಲಕೇಶ್ವರ, ನಾಗೇಶ್ವರ, ಅಷ್ಟಾವಕ್ರಮಹಾದೇವ, ಮತ್ತು ರಾಜರಾಜೇಶ್ವರಿ ಗುಡಿಗಳು ನೋಡತಕ್ಕವುಗಳಾಗಿವೆ. ಈ ನಗರದಲ್ಲಿ ಮಾತ್ರ ಎತ್ತಿನ ಗಾಡಿಗಳಿವೆ. ಈ ಭಾಗದಲ್ಲಿ ಮತ್ತೆಲ್ಲಿಯೂ ಎತ್ತಿನ ಗಾಡಿಗಳು ನೋಡಲಿಕ್ಕೆ ಸಿಕ್ಕಲಾರವು. ಇಲ್ಲಿಂದ ನಜಿಬಾಬಾದಕ್ಕೂ, ಟಿಹರಿ ಮೇಲಿಂದ ಮಸೂರಿಗೂ ಹೀಗೆ ಎರಡು ಮಾರ್ಗಗಳು ಹೋಗಿವೆ. ಶ್ರೀನಗರವು ಹೃಷೀಕೇಶದಿಂದ ೬೦॥ ಮೈಲು ಇದೆ.

ಶ್ರೀನಗರದಿಂದ ೨ ಮೈಲುಗಳ ಮೇಲೆ ಶ್ರೀಕೋಟ; ೫ ಮೈಲಿನ ಮೇಲೆ ಸುಕ್ರತಾಚಟ್ಟಿ, ೮॥ ಮೈಲಿನ ಮೇಲೆ ಭಟ್ಟೀಸೇರಾ ಚಟ್ಟಿಗಳಿವೆ. ಮಾರ್ಗದಲ್ಲಿ ಬೈಲು ಪ್ರದೇಶವೂ ಹೊಲಗಳೂ ಉಂಟು. ನದೀ ತೀರದಲ್ಲಿ ದ್ರೌಪದಿಶಿಲೆಯಿದೆ. ೩ ಮೈಲಿನ ಮೇಲೆ ಖಾಂಕರಾಚಟ್ಟಿ, ೬ ಮೈಲಿನ ಮೇಲೆ ನರಕೋಟಾ, ೧೧॥ ಮೈಲಿನ ಮೇಲೆ ಗುಲಾಬರಾಯ ಚಟ್ಟಿಗಳಿವೆ. ಗುಲಾಬರಾಯಚಟ್ಟಿಯಲ್ಲಿ ೨ ಧರ್ಮಶಾಲೆ, ೩-೪ ಅಂಗಡಿಗಳಿವೆ. ಇಲ್ಲಿಂದ ೧॥ ಮೈಲಿನ ಮೇಲಿರುವ ರುದ್ರಪ್ರಯಾಗದ ಮಂದಿರವು ಇಲ್ಲಿಂದ ಬಹಳ ಮನೋಹರವಾಗಿ ಕಾಣುತ್ತದೆ.

ಭಟ್ಟೀಸೇರಾ

ಇದು ಮಂದಾಕಿನಿ, ಅಲಕನಂದಾ ನದಿಗಳ ಸಂಗಮ ಸ್ಥಾನವು. ಇಲ್ಲಿಂದ ಒಂದು ಮಾರ್ಗವು ಕರ್ಣಪ್ರಯಾಗದ ಮೇಲಿಂದ ಬದರಿಗೆ ಹೋಗಿದೆ. ಆದರೆ ಮಂದಾಕಿನಿ ದಂಡೆಯಗುಂಟ ಕೇದಾರಕ್ಕೆ ಹೋಗುವ ಮಾರ್ಗವನ್ನು ಇಲ್ಲಿ ಕೊಡಲಾಗಿದೆ. ಇಲ್ಲಿ ಮದ್ರನಾಥನ ಮಂದಿರವಿದೆ. ೮-೧೦ ಅಂಗಡಿಗಳು ೨ ಧರ್ಮಶಾಲೆಗಳಿವೆ. ಇದು ಎರಡನೆಯ ಪ್ರಯಾಗವು. ಅಲಕನಂದಾ ನದಿಯನ್ನು ದಾಟಲು ನೇತಾಡುವ ಪೂಲುಂಟು. ಇಲ್ಲಿಂದ ೬ ಮೈಲಿನ ಮೇಲೆ ಛಿತೌಲಿಚಟ್ಟಿ, ೭ ಮೈಲಿನಮೇಲೆ ರಾಮಪುರ ಚಟ್ಟಿಗಳಿರುತ್ತವೆ. ರಾಮಪುರಚಟ್ಟಿಯ ವರೆಗೆ ಸರಳ ಮಾರ್ಗವಿದೆ. ರಾಮಪುರಚಟ್ಟಿಯಲ್ಲಿ ಕೆಲವು ಅಂಗಡಿಗಳೂ ಹುಲ್ಲಿನ ಚಟ್ಟಿಗಳೂ ಉಂಟು. ಇಲ್ಲಿಂದ ೩॥ ಮೈಲಿನ ಮೇಲೆ ಅಗಸ್ತ್ಯ ಮುನಿಚಟ್ಟಿಯುಂಟು.

ರುದ್ರಪ್ರಯಾಗ

ಇಲ್ಲಿ ಒಂದು ಧರ್ಮಶಾಲೆ ೧೫-೨೦ ಪಕ್ಕಾ ಮನೆಗಳಿವೆ. ಮಧ್ಯದಲ್ಲಿ ಅಗಸ್ತ್ಯಮುನಿಯ ಗುಡಿಯಿದೆ. ಇಲ್ಲಿಂದ ಹಿಮಶಿಖರಗಳು ಬಹಳ ಮನೋಹರವಾಗಿ ಕಾಣುವವು. ಇಲ್ಲಿಂದ ೨॥

ಅಗಸ್ತ್ಯ ಮುನಿಚಟ್ಟಿ

ಮೈಲಿನ ಮೇಲೆ ಮಹಾದೇವಚಟ್ಟಿಯುಂಟು. ಮಹಾದೇವಚಟ್ಟಿಯಲ್ಲಿ ಒಂದು ಧರ್ಮಶಾಲೆ, ೭-೮ ಪಕ್ಕಾ ಮನೆಗಳು, ಅಂಗಡಿಗಳು, ೨ ಉತ್ತಮ ನೀರಿನ ಝರಿಗಳುಂಟು. ಸಮೀಪದಲ್ಲಿ ಮಂದಾಕಿನಿ ನದಿಯಿದೆ. ಇಲ್ಲಿಂದ ೧॥ ಮೈಲಿನ ಮೇಲೆ ಚಂದ್ರಾಪುರಿಯಿದೆ. ಚಂದ್ರಾಪುರಿಯಲ್ಲಿ ಚಂದ್ರೇಶ್ವರಿಯ ಗುಡಿಯೂ, ಕೆಲ ಅಂಗಡಿಗಳೂ, ಯಾತ್ರಿಕರಿಗಾಗಿ ಇಳಕೊಳ್ಳುವ ಸ್ಥಳಗಳೂ ಉಂಟು. ಇಲ್ಲಿಂದ ೩ ಮೈಲಿನ ಮೇಲೆ ಭೀರೀಚಟ್ಟಿಯಿದೆ.

ಮಂದಾಕಿನೀ ನದಿಯ ಎರಡೂ ದಂಡೆಗಳಿಗೆ ಕೆಲ ಮನೆಗಳಿದ್ದು ಸರಕಾರೀ ಧರ್ಮಶಾಲೆಯೊಂದಿದೆ. ಸತ್ಯನಾರಾಯಣ, ಭೀಮನ

ಭೀರೀಚಟ್ಟಿ

ಮೂರ್ತಿಗಳಿವೆ. ೩ ಕಲ್ಲುಗಳಲ್ಲಿ ೩೬ ಮೂರ್ತಿಗಳನ್ನು ಕೊರೆದುದು ಪ್ರೇಕ್ಷಣೀಯವಾಗಿದೆ. ಮಂದಾಕಿನಿಯ ಎಡದಂಡೆಗುಂಟ ಊಖೀಮಠಕ್ಕೆ ಒಂದು ದಾರಿ ಹೋಗಿದೆ. ಬಲಗಡೆಯ ದಾರಿಯು ಗುಪ್ತಕಾಶಿಗೆ ಹೋಗಿದೆ. ಇಲ್ಲಿಂದ ೩॥ ಮೈಲಿನ ಮೇಲೆ ಕುಂಡಚಟ್ಟಿಯೂ, ೬॥ ಮೈಲಿನ ಮೇಲೆ ಗುಪ್ತಕಾಶಿಯೂ ಇವೆ. ಇವೆರಡರ ನಡುವಿನ ದಾರಿಯು ಶೋಣಿತಪುರಕ್ಕೆ ಹೋಗಿದೆ.

ಶೋಣಿತಪುರದಲ್ಲಿ ಅನಿರುದ್ಧ ಮತ್ತು ಪಂಚಮುಖಿ ಮಹಾದೇವರ ಗುಡಿಗಳುಂಟು. ಕೇದಾರನಾಥನ ಪಂಡಾಗಳು ಇಲ್ಲಿಯೇ

ಶೋಣಿತಪುರ

ಇರುತ್ತಾರೆ. ಕುಂಡಚಟ್ಟಿಯಿಂದ ಗುಪ್ತಕಾಶಿಗೆ ಹೋಗುವ ಮಾರ್ಗದಲ್ಲಿ ಶೋಣಿತಪುರವಿಲ್ಲ; ಆದರೆ ಸ್ವಲ್ಪ ಅಡ್ಡದಾರಿಯಿಂದ ಹೋಗಬೇಕಾಗುವುದು. ಕುಂಡಚಟ್ಟಿಯಿಂದ ಗುಪ್ತಕಾಶಿಯ ವರೆಗೆ ದುರ್ಗಮವಾದ ಏರಿಯಿರುವದು.

ಹರಿದ್ವಾರದಿಂದ ೧೨ ದಿವಸ ಮಾರ್ಗಕ್ರಮಣಮಾಡಿದ ಮೇಲೆ ನಾನು ಗುಪ್ತಕಾಶಿಗೆ ತಲ್ಪಿದೆನು. ಇಲ್ಲಿಂದ ಕಾಣುವ ಹಿಮಾಲಯದ

ಗುಪ್ತಕಾಶಿ

ಸ್ವರ್ಗೀಯ ದೃಶ್ಯವು ಬಹಳ ಮನೋಹರವಾಗಿದೆ. ಇಲ್ಲಿ ಕೆಲ ಧರ್ಮಶಾಲೆ ಅಂಗಡಿಗಳುಂಟು. ಇಲ್ಲಿ ವಿಶ್ವನಾಥನ

ಗುಡಿ, ಗೋಮುಖ, ಗಜಮುಖಗಳಿಂದ ಕುಂಡದಲ್ಲಿ ಬೀಳುವ ಗುಪ್ತ ಗಂಗೆ ಪ್ರೇಕ್ಷಣೀಯವಾಗಿವೆ. ಇಲ್ಲಿ ಗುಪ್ತದಾನ ಕೊಡುವ ವಾಡಿಕೆ ಯಿದೆ. ಬರ್ಫಿನ ಚಳಿಯು ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಕೇದಾರನಾಥನ ಪಂಡಾಗಳು ಇಲ್ಲಿಂದಲೇ ಯಾತ್ರಿಕರ ಬೆನ್ನುಹತ್ತುತ್ತಾರೆ. ಮುಂದಿನ ಪ್ರವಾಸಕ್ಕೆ ಬೇಕಾಗುವ ಎಲ್ಲ ಸಾಮಾನುಗಳನ್ನು ಇಲ್ಲಿಯೇ ಕೊಂಡುಕೊಳ್ಳಬಹುದು. ಇಲ್ಲಿಂದ ಒಂದು ಮೈಲಿನ ಮೇಲೆ ನಾಲಾ ಚಟ್ಟಿಯಿದೆ.

ಕೇದಾರಯಾತ್ರೆಯನ್ನು ಮುಗಿಸಿಕೊಂಡು ಬದರಿಗೆ ಹೋಗುವವರು ತಿರುಗಿ ಇಲ್ಲಿಯ ವರೆಗೆ ಬಂದು ನದೀ ದಾಟಿ ಓಖೀಮಠ, ಚಪ್ತೋಲಿಗಳ ಮೇಲಿಂದ ಬದರಿಗೆ ಹೋಗುತ್ತಾರೆ. ಇಲ್ಲಿಂದ ೩ ಮೈಲಿನ ಮೇಲೆ ಬ್ಯುಂಗಗಡ ಎಂಬ ಹಳ್ಳಿಯಿದೆ. ೩॥ ಮೈಲುಗಳ ಮೇಲೆ ಧಾಮಾಕೋಟಿಯಿರುತ್ತದೆ. ಧಾಮಾಕೋಟಿ ಯಲ್ಲಿ ಒಂದು ಧರ್ಮಶಾಲೆ ಕೆಲ ಅಂಗಡಿಗಳಿವೆ. ಇಲ್ಲಿಂದ ೨। ಮೈಲಿನ ಮೇಲೆ ಫಾಟಾಚಟ್ಟಿ, ೩ ಮೈಲಿನ ಮೇಲೆ ಶೀರಸಚಟ್ಟಿ ೪॥ ಮೈಲಿನ ಮೇಲೆ ರಾಮಪುರಚಟ್ಟಿಯಿವೆ. ನಾಲಾಚಟ್ಟಿಯ ವರೆಗೆ ೧ ಮೈಲು ಇಳುಕಲಿದೆ.

ನಾಲಾಚಟ್ಟಿ

ಇಲ್ಲಿಂದ ಒಂದು ದಾರಿಯು ತ್ರಿಜುಗೀನಾರಾಯಣಕ್ಕೂ ಇನ್ನೊಂದು ದಾರಿಯು ಕೇದಾರಕ್ಕೂ ಹೋಗಿವೆ. ಇಲ್ಲಿಂದ ಏರಿ ಹತ್ತುವದು. ೩॥ ಮೈಲುಗಳ ಮೇಲೆ ಕಂಬರೀ ದುರ್ಗಾದೇವಿಯ ಮೂರ್ತಿಯೂ, ೪॥ ಮೈಲಿನ ಮೇಲೆ ತ್ರಿಜುಗೀನಾರಾಯಣವೂ ಇರುತ್ತವೆ. ಪ್ರಯಾಣಿಕರು ತ್ರಿಜುಗೀನಾರಾಯಣದ ಮೇಲಿಂದ ಕೇದಾರಕ್ಕೆ ಹೋಗುವರು.

ರಾಮಪುರಚಟ್ಟಿ

ಇಲ್ಲಿ ನಾರಾಯಣನ ಮಂದಿರವಿದೆ. ಇಲ್ಲಿ ಬ್ರಹ್ಮಕುಂಡ ರುದ್ರ ಕುಂಡಗಳಲ್ಲಿ ಸ್ನಾನಮಾಡಿ, ವಿಷ್ಣುಕುಂಡದಲ್ಲಿಯ ನೀರು ಕುಡಿಯು ತ್ತಾರೆ. ಸರಸ್ವತಿಕುಂಡದಲ್ಲಿ ತರ್ಪಣ ಕೊಡುತ್ತಾರೆ. ಗುಡಿಯಲ್ಲಿ ನಾರಾಯಣನೆದುರಿಗಿರುವ ಒಂದು ಅಗ್ನಿಕುಂಡದಲ್ಲಿ ಯಾತ್ರಿಕರೆಲ್ಲರೂ ತುಪ್ಪದಿಂದ ಹೋಮ ಮಾಡು

ತ್ರಿಜುಗೀನಾರಾಯಣ

ತ್ತಾರೆ. ಊರಲ್ಲಿ ಧರ್ಮಶಾಲೆ ಮತ್ತು ಅನೇಕ ಅಂಗಡಿಗಳಿದ್ದು ಬೇಕಾದ ಸಾಮಾನುಗಳು ಸಿಕ್ಕುತ್ತವೆ. ಇಲ್ಲಿಗೆ ಬರಬೇಕಾದರೆ ದುರ್ಗಮವಾದ ಏರಿಯನ್ನು ಹತ್ತಬೇಕಾದ್ದರಿಂದ ಅನೇಕ ಯಾತ್ರಿಕರು ಇಲ್ಲಿಗೆ ಬರದೆ ನೆಟ್ಟಗೆ ಕೇದಾರಕ್ಕೆ ಹೋಗುತ್ತಾರೆ. ಗಂಗೋತ್ರಿಯಿಂದ ಇಲ್ಲಿಯ ವರೆಗೆ ಅನೇಕ ಯಾತ್ರಿಕರು ಕಾಲುದಾರಿಯಿಂದ ಬಂದು ಮುಂದೆ ಹಾಗೇ ಕೇದಾರಕ್ಕೆ ಹೋಗುತ್ತಾರೆ. ೨॥ ಮೈಲು ಇಳು ಕಲಿಳಿದ ಮೇಲೆ ಸೋನಪ್ರಯಾಗವೂ, ೪ ಮೈಲಿನ ಮೇಲೆ ಚೀರ ವಾಸಾ ಭೈರವಚಟ್ಟಿಯೂ (ವಾಸುಕಿಗಂಗಾ ಮತ್ತು ಮಂದಾಕಿನಿಗಳ ಸಂಗಮಸ್ಥಾನವು) ಪೂಲು ದಾಟಿ ೫ ಮೈಲಿನ ಮೇಲೆ ಗೌರೀಕುಂಡವೂ ಇವೆ.

ಗೌರೀಕುಂಡ ಗೌರೀಕುಂಡ ಪರ್ವತವು ಅನೇಕ ಗಗನಚುಂಬಿತ ವೃಕ್ಷಗಳಿಂದಲೂ ಭೋರ್ಗರೆಯುತ್ತ ಹರಿಯುವ ನದಿಯ ಸುಂದರ ಪ್ರವಾಹ ದಿಂದಲೂ ಒಳ್ಳೇ ರಮಣೀಯವಾಗಿದೆ. ಇಲ್ಲಿ ಗೋಮುಖವಾಗಿ ಬೀಳುವ ಬಿಸಿ ನೀರಿನ ಝರಿಯೊಂದಿದೆ. ಇಲ್ಲಿ ಸ್ನಾನ ಮಾಡುವದು ಕಠಿಣ. ಅನೇಕ ಜನರು ಹಸ್ತಪಾದ ಪ್ರಕ್ಷಾಲನದಿಂದಲೇ ತೃಪ್ತರಾಗುವರು. ಇದರ ದಕ್ಷಿಣಕ್ಕಿರುವ ಗೌರೀ ಕುಂಡದಲ್ಲಿ ಎಲ್ಲರೂ ಸ್ನಾನಮಾಡುತ್ತಾರೆ. ಇಲ್ಲಿ ಇಳಿದುಕೊಳ್ಳಲು ಉತ್ತಮ ಸ್ಥಳಗಳಿವೆ. ೪-೬ ಅಂಗಡಿಗಳಿವೆ. ಸಮೀಪದಲ್ಲಿರುವ ದಟ್ಟಡಿವೆಯಲ್ಲಿ ಕೆಲವು ಗುಹೆಗಳಿವೆ. ಇಲ್ಲಿಂದ ರಾಮವಾಡಕ್ಕೆ ಹೋಗುವ ದಾರಿಯು ಸುಮಾರು ೫ ಮೈಲು ಕಠಿಣವಾದ ಏರಿಯಿದ್ದು ದಾರಿಯಲ್ಲಿ ಅನೇಕ ಹೊಬಳ್ಳಿಗಳಿವೆ.

ಹಿಮಾಚ್ಛಾದಿತ ರಾಮವಾಡವು ನಾನು ಗೌರೀಕುಂಡವನ್ನು ಬಿಟ್ಟು ಮುಂದಕ್ಕೆ ಹೊರಡಲು ಸಿದ್ಧನಾದಾಗ ಮುಂದಿನ ದಾರಿಯೆಲ್ಲ ಇನ್ನೂ ಬರ್ಫದಲ್ಲಿ ಮುಳುಗಿದ್ದಿತು. ಅಧಿಕಾರಿಗಳು ಅದೇ ಬರ್ಫವನ್ನು ಕೊರೆದು ದಾರಿ ಮಾಡಲು ಪ್ರಾರಂಭಿಸಿದ್ದರು. 'ಇನ್ನೂ ಗುಡಿಯು ಬರ್ಫದಲ್ಲಿ ಮುಚ್ಚಿದೆ ದಾರಿಯು ಬಹಳ ಕಠಿಣವಾಗಿದೆ. ಮುಂದಕ್ಕೆ ಹೋಗಬೇಡಿರೆಂದು ಆ ಅಧಿಕಾರಿಯು ನನಗೆ ಪರಿಪರಿಯಾಗಿ ಹೇಳಿದನು.

ಆದರೆ ನನಗೆ ಒಂದು ತರದ ಅಂತಃಸ್ಫೂರ್ತಿಯಾದ್ದರಿಂದ ಯಾರ ಮಾತನ್ನು ಕೇಳದೆ ಮುಂದೆ ಸಾಗಬೇಕೆಂದು ನಿಶ್ಚಯ ಮಾಡಿದೆನು. ನನ್ನೀ ದೃಢನಿಶ್ಚಯವನ್ನು ಕಂಡು ಅಧಿಕಾರಿಗಳೂ ನನಗೆ ಹೋಗ ಗೊಟ್ಟರು. 'ದೇವರನ್ನು ಕಾಣದೆ ಮರಳಿ ಬರುವಿ' ಎಂದೂ ಅವರು ನುಡಿದರು. ಮುಂದೆ ಹೋಗಲು ಅನುಮಾನಿಸುತ್ತಿದ್ದ ೩ ಜನ ಯಾತ್ರಿಕರೂ ನನ್ನನ್ನು ಹಿಂಬಾಲಿಸಿದರು. ಜೀವದ ಮೇಲಿನ ಹಂಗುದೊರೆದು ಬರುವದಿದ್ದರೆ ಬನ್ನಿರೆಂದು ನಾನವರಿಗೆ ಖಂಡಿತವಾಗಿ ಹೇಳಿದೆನು. "ನಿಮ್ಮಂಥವರು ನಮಗೆ ನಾಯಕರಾಗಿರುವಾಗ ನಮ ಗೇತರ ಚಿಂತೆ" ಎಂದು ನುಡಿದು ಅವರು ನನ್ನನ್ನು ಹಿಂಬಾಲಿಸಿದರು. ಆಗ ರಾಮವಾಡಚಟ್ಟಿಯು ಇನ್ನೂ ತೆರೆದಿರಲಿಲ್ಲ. ಆದರೂ ಇಳಿ ಯುವ ಸ್ಥಳವು ಮತ್ತು ೪-೫ ಅಂಗಡಿಗಳು ತೆರೆದಿದ್ದವು. ಅಲ್ಲಿ ಒಂದೆ ರಡು ತಾಸು ವಿಶ್ರಮಿಸಿ ಮುಂದೆ ಸಾಗಿದೆವು.

ರಾಮವಾಡದಿಂದ ಮುಂದೆ ಸಾಗಿದಂತೆ ಗುಡ್ಡದಲ್ಲಿ ಗಿಡಗಳಿಲ್ಲ ದಂತಾಗುವುವು. ಎದುರಿಗೆ ಉನ್ನತವಾದ ಬರ್ಫಿನ ಶಿಖರಗಳು ಗೋಡೆ

ಬರ್ಫಾಚ್ಛಾದಿತ ಮಾರ್ಗವು.

ಗಳಂತೆ ನೆಟ್ಟಗೆ ಎದ್ದು ನಿಂತಂತೆ ಕಾಣಹತ್ತುವವು. ಕೆಳ ಗಡೆಗೆ ನದಿಯ ನೀರೆಲ್ಲಾ ಹೆಪ್ಪಾಗಿ ಕೆಲವು ಕಡೆಗೆ ಒಳ ಗಿಂದ ನೀರು ಹೊರಚಿಮ್ಮಹತ್ತಿತ್ತು. ದಾರಿಯ ಮೇಲಿ ರುವ ಕೊಳ್ಳಗಳು ೧-೨ ಫರ್ಲಾಂಗುಗಳ ವರೆಗೆ ಬರ್ಫಿನಿಂದ ತುಂಬಿ ಹೋಗಿದ್ದವು. ಅದರ ಮೇಲೆಯೇ ನಮಗೆ ನಡೆಯಬೇಕಾಯಿತು. ಕಾಲು ಜಾರಿದ್ದರೆ ಸಾವಿರಾರು ಫೂಟು ಕೆಳಗೆ ಹೋಗುವ ಸಂಭವವಿ ದ್ದಿತು. ಹೀಗೆ ಅತ್ಯಂತ ದುರ್ಗಮವಾದ ಬರ್ಫಿನ ಗುಡ್ಡವನ್ನು ಹತ್ತುವಾಗ ಕೆಲವೊಂದು ಕಡೆಗೆ ಕೆಳಬದಿಯಲ್ಲಿ ಕರಗಿದ ಬರ್ಫು ಕಳ್ಳು ಸುಕಿನಂತಿದ್ದಿತು. ಇಂಥ ದಾರಿಯಲ್ಲಿ ಮುಂದಕ್ಕೆ ಸಾಗಿದಾಗ ನಾನು ಒಮ್ಮೆಲೇ ಮೊಳಕಾಲ ವರೆಗೆ ಬರ್ಫಿನಲ್ಲಿ ಸಿಗಬಿದ್ದೆನು. ಆದರ ಸುದೈವದಿಂದ ನನಗೆ ಒಂದು ಸಣ್ಣ ಕೋಲು ಸಿಕ್ಕದ್ದರಿಂದ ಅದರ ಆಧಾರದಿಂದ ನಾನು ಮೇಲಕ್ಕೇರಿದೆನು. ಇದರಿಂದ ನಾವು ಹೆಚ್ಚು ಜಾಗರೂಕತೆಯಿಂದ ಮಾರ್ಗ ನಡೆಯಹತ್ತಿದೆವು. ನನ್ನ ಮೈಮೇಲೆ

ಅಂಗಿಗಳಿದ್ದಿಲ್ಲ; ಆದರೆ ಎರಡು ಖಾದೀ ಪಂಜೆ ಒಂದು ಕಂಬಳಿ ಮಾತ್ರ ಮೈಮೇಲಿದ್ದುವು. ಆದ್ದರಿಂದ ಬಹಳ ಚಳಿಯಿಂದ ನನ್ನ ಕೈಕಾಲುಗಳೆಲ್ಲ ಸೆಟೆದವು. ಆದರೂ ನಾನು ಮುಂದಕ್ಕೆ ಸಾಗಿದೆನು. ನನ್ನನ್ನು ಹಿಂಬಾಲಿಸಿದವರು ಮುಂದಕ್ಕೆ ನಡೆಯಲಾರದೆ ಹಿಂದಿರುಗಿದರು. ನಾನೊಬ್ಬನೇ ಬೀಳುತ್ತ ಏಳುತ್ತ ಮುಂದಕ್ಕೆ ಸಾಗಿ ಶ್ರೀ ಕೇದಾರನಾಥನ ಗುಡಿಗೆ ಮುಟ್ಟಿದೆನು.

ಕೇದಾರನಾಥನ ಸ್ವರ್ಗೀಯ ದೃಶ್ಯವೂ ಒಬ್ಬ ದಿವ್ಯ ಪುರುಷನ ಸಂದರ್ಶನವೂ

ಕೇದಾರ ಪರ್ವತವು ಸಮುದ್ರ ಸಪಾಟಿಯಿಂದ ಸುಮಾರು ೧೫೦೦೦ ಫೂಟು ಎತ್ತರದ ಮೇಲಿರುವದು. ನಾನು ಕೇದಾರನಾಥವನ್ನು ಮುಟ್ಟಿದಾಗ ಗುಡಿಯು ಅರ್ಧಕ್ಕಿಂತ ಹೆಚ್ಚು ಭಾಗವು ಮತ್ತು ಅಂಗಡಿ ಧರ್ಮಶಾಲೆಗಳು ಸಂಪೂರ್ಣವಾಗಿ ಬರ್ಫಿನಲ್ಲಿ ಮುಚ್ಚಲ್ಪಟ್ಟಿದ್ದವು. ಗುಡಿಯು ಸ್ವಲ್ಪ ಎತ್ತರದಲ್ಲಿದ್ದು ಆದರ ಹಿಂಭಾಗವು ಬರ್ಫಿನ ಶಿಖರಕ್ಕೆ ಸಮೀಪವಾಗಿದೆ. ಮುಂಭಾಗವು ಕಡಿದಾಗಿರುವದರಿಂದ ಬರ್ಫವು ಕರಗಿ ಗುಡಿಯಲ್ಲಿ ಪ್ರವೇಶಿಸಲು ಮಾರ್ಗವಿತ್ತು. ಆದರೆ ಗರ್ಭಗುಡಿಗೆ ಬೀಗವಿದ್ದಿತು. ಈ ಸ್ಥಳದಲ್ಲಿ ಮೂರೂ ಕಡೆಗೂ ಸುಮಾರು ೨೦-೨೫ ಮೈಲುಗಳ ವರೆಗೆ ಬರ್ಫಿನ ಶಿಖರಗಳೇ ಕಾಣುತ್ತವೆ. ಗುಡಿಯ ಬೆನ್ನುಗೋಡೆಯಂತಿರುವ ಶಿಖರಗಳು ೨೦-೨೨ ಸಾವಿರ ಫೂಟು ಎತ್ತರವಾಗಿರುವವು. ಈ ಶಿಖರಗಳಲ್ಲಿ ಮುಂದೆ ಯಾವ ಕಡೆಗೂ ಹೋಗಲಿಕ್ಕೆ ಮಾರ್ಗಗಳೇ ಕಾಣುವದಿಲ್ಲ. ಯಾಕೆಂದರೆ ಪರ್ವತಗಳು ಗೋಡೆಗಳಂತೆ ನೆಟ್ಟಗೆ ಇರುತ್ತವೆ. ಈ ಶಿಖರಗಳಲ್ಲಿ ಎಷ್ಟೋ ನದಿಗಳ ಪ್ರವಾಹಗಳು ಹೊರಟಿವೆ. ಮಂದಾಕಿನಿಯು ಮೇಲಿನಿಂದ ಹರಿದು ಬರುತ್ತಾಳೆ. ಆದರೆ ನಾನು ಹೋದಾಗ ಬರ್ಫು ಇನ್ನೂ ಪೂರ್ಣವಾಗಿ ಕರಗಿದ್ದಿಲ್ಲ. ಈ ರೀತಿಯಾಗಿ ಸ್ವರ್ಗೀಯ ದೃಶ್ಯವನ್ನು ನೋಡುತ್ತ ಕುಳಿತಿದ್ದೆನು. ಆದರೆ ಈ ಸಮಯದಲ್ಲಿ ನನ್ನ ಶರೀರದ ಸ್ಥಿತಿಯು ಹೇಗಾಗಿತ್ತೆಂಬದನ್ನು ಸ್ವಲ್ಪ ಹೇಳುವೆನು. ನನ್ನ ಕೈ ಕಾಲುಗಳೆಲ್ಲ ಈ ಮೊದಲೇ ಸೆಟೆದು ಹೋಗಿದ್ದವು. ಇಂಥ ಸ್ಥಿತಿಯಲ್ಲಿಯೇ ಮತ್ತೆ ಅನೇಕ ಮೈಲು ಪ್ರವಾಸ

ಮಾಡಿದ್ದರಿಂದ, ಮತ್ತು ನಾನಲ್ಲಿಗೆ ಹೋದಾಗ ಸಾಯಂಕಾಲವಾದ್ದರಿಂದ ಚಳಿಯು ಹೆಚ್ಚಾಗಿ ಮೈಯಲ್ಲಿಯ ರಕ್ತ ಪ್ರವಾಹವು ನಿಂತು ಹೋದಂತಾಗಿ ಹಲ್ಲು ಗಟಗರಿಸಹತ್ತಿದವು. ಕಿವಿಗಳು ಕೇಳದಾದವು. ಕಣ್ಣುಗಳು ಮಂದಾದವು. ಆದರೆ ಅಲ್ಲಿನ ಆ ಸ್ವರ್ಗೀಯ ನೈಸರ್ಗಿಕ ಶೋಭೆಯನ್ನು ನೋಡಿಯೋ, ಅಥವಾ ಕೇದಾರನಾಥನ ಕೃಪೆಯಿಂದಲೋ ಇಲ್ಲವೆ ಅಲ್ಲಿ ವಾಸಮಾಡಿರುವ ತಪಸ್ವಿಗಳ ತಪಃಪ್ರಭಾವದಿಂದಲೋ ಇಂಥ ಸ್ಥಿತಿಯಲ್ಲಿಯೂ ನನಗೊಂದು ತರಹದ ಆನಂದವೆನಿಸಹತ್ತಿತು. ಶರೀರವು ಚಳಿಯಿಂದ ನಡಗುತ್ತಿದ್ದರೂ ಹೃದಯವು ದೈವೀ ಆನಂದದಿಂದ ಪುಲಕಿತವಾಗಿದ್ದಿತು. ಇಂಥ ಪರಿಸ್ಥಿತಿಯಲ್ಲಿ ಬರ್ಫಿನ ದಿನ್ನಿಯ ಮೇಲೆ ಒಬ್ಬ ಯೋಗಿಯು ಕುಳಿತದ್ದನ್ನು ನೋಡಿದ ಕೂಡಲೇ ಅವನೆಡೆಗೆ ಹೋಗಬೇಕೆಂದು ನನಗೆ ಸ್ಫೂರ್ತಿಯಾಯಿತು. ಅವನ ಹೇಳಿಕೆಯಂತೆ ನಾನವನನ್ನು ಹಿಂಬಾಲಿಸಿದೆನು. ಆ ದಿನ್ನೆಯ ಹಿಂಭಾಗದಲ್ಲಿರುವ ಒಂದು ಸಣ್ಣ ದ್ವಾರದಿಂದ ಆ ಯೋಗಿಯ ನಿವಾಸಸ್ಥಾನವನ್ನು ಪ್ರವೇಶಿಸಿದೆವು. ಆ ಮನೆಯು ಬರ್ಫಿನಿಂದ ಮುಚ್ಚಲ್ಪಟ್ಟದ್ದಿತು. ಒಳಗೆ ಪ್ರವೇಶಿಸಿದ ಕೂಡಲೆ ಅಗ್ನಿಯ ಹತ್ತರ ನಾನೊಂದು ಆಸನದ ಮೇಲೆ ಕುಳಿತೆನು. ಆಕ್ಷಣ ಎಚ್ಚರ ತಪ್ಪಿದಂತಾಗಿ ನಾನು ಅಡ್ಡಬಿದ್ದುಕೊಂಡೆನು. ಸುಮಾರು ೨೦–೨೫ ನಿಮಿಷಗಳ ವರೆಗೆ ಇದೇ ಸ್ಥಿತಿಯಲ್ಲಿದ್ದೆನು. ಅನಂತರ ಯೋಗಿಯ ಶಿಷ್ಯನೊಬ್ಬನು ಬಂದು ದೇವದರ್ಶನಕ್ಕೆ ಹೊರಡೆಂದು ನನ್ನನ್ನೆಬ್ಬಿಸಿದನು. ಎದ್ದು ನೋಡುತ್ತೇನೆ, ನನ್ನ ಸಂಗಡ ಹೊರಟ ಸಂಯುಕ್ತ ಪ್ರಾಂತದ ಮೂವರು ಪ್ರವಾಸಿಗಳು ಮತ್ತೆ ಇಬ್ಬರು ಅಲ್ಲಿದ್ದರು. ಅವರೂ ಕೆಲ ಹೊತ್ತು ಅಗ್ನಿಯ ಬಳಿಯಲ್ಲಿ ವಿಶ್ರಮಿಸಿದ ಮೇಲೆ ಎಲ್ಲರೂ ಕೂಡಿ ಕೇದಾರನಾಥನ ದರ್ಶನಕ್ಕೆ ಹೋದೆವು.

ಸುಮಾರು ರಾತ್ರಿ ೮॥ ಗಂಟೆಗೆ ಕೇದಾರನಾಥನ ದರ್ಶನಕ್ಕೆ ಹೋದೆವು. ಸೂರ್ಯನು ಮುಳುಗಿ ಎಷ್ಟೋ ಹೊತ್ತಾಗಿದ್ದರೂ

ಉನ್ನತವಾದ ಶಿಖರಗಳ ಮೇಲೆ ಇನ್ನೂ ಪ್ರಕಾಶವಿದ್ದಿತು.

**ಕೇದಾರನಾಥನ ದರ್ಶನ.**

ಕೇದಾರನಾಥನ ಮಂದಿರವು ಕಲ್ಲಿನದಿದ್ದು, ವರ್ಷದಲ್ಲಿ ೬ ತಿಂಗಳ ಬರ್ಫಿನಲ್ಲಿ ಮುಚ್ಚಲ್ಪಟ್ಟಿದ್ದರೂ ಸ್ವಲ್ಪವೂ ಶಿಥಿಲವಾಗದಷ್ಟು ಗಟ್ಟಿಯಿದೆ. ಗರ್ಭಗುಡಿಯಲ್ಲಿ ಪ್ರವೇಶಿಸಿ ಕೇದಾರನಾಥನ ಸ್ವಯಂಭೂ ಪ್ರತಿಮೆಯ ದರ್ಶನ ತೆಗೆದುಕೊಂಡೆವು. ಈ ಮೂರ್ತಿಯು ೩-೪ ಮೊಳ ಉದ್ದ, ೧-೨ ಮೊಳ ಅಗಲ ಮತ್ತು ಅಷ್ಟೇ ಎತ್ತರವಿದ್ದು ಚನ್ನಾಗಿದೆ. ಗಂಗಾಜಲದಿಂದ ದೇವರಿಗೆ ಅಭಿಷೇಕ ಮಾಡಿ ಪುಷ್ಪಗಳನ್ನು ಸಮರ್ಪಿಸಿದೆವು. ವಿಶೇಷ ಚಳಿಯಿದ್ದುದರಿಂದ ಬಹಳ ಹೊತ್ತು ಅಲ್ಲಿ ನಿಲ್ಲಲಾರದೆ ಹೊರಗೆ ಬಂದೆವು. ಹೊರಗೆ ಬಂದ ಮೇಲೆ ನಮ್ಮ ಕೂಡ ಬಂದ ಆ ಶಿಷ್ಯನು ನಮಗೆ 'ಸತ್ತು'ದಂಥ ಹಿಟ್ಟಿನ ಪ್ರಸಾದವನ್ನು ಕೊಟ್ಟನು. ರಾತ್ರಿಯನ್ನೆಲ್ಲ ಆ ಯೋಗಿಯ ಗುಹೆಯಲ್ಲಿಯೇ ಕಳೆದೆವು. ಯೋಗಿಯು ಹೆಚ್ಚಾಗಿ ಮಾತಾಡುತ್ತಿರಲಿಲ್ಲ. ಮರುದಿನ ಬೆಳಿಗ್ಗೆ ನೋಡಲು ನಾನು ಮತ್ತು ಸಂಯುಕ್ತಪ್ರಾಂತದಿಂದ ಬಂದ ಮೂವರು ಪ್ರವಾಸಿಕರ ಹೊರತು ಬೇರೆ ಯಾರೂ ಅಲ್ಲಿರಲಿಲ್ಲ. ಬರ್ಫು ಬಿದ್ದು ದಾರಿ ಬಂದಾದ್ದರಿಂದ ೧೨ ಗಂಟೆಯ ವರೆಗೆ ಅಲ್ಲಿಯೇ ಉಳಿದು, ಅನಂತರ ಬಂದ ದಾರಿಯಿಂದಲೇ ಗೌರೀಕುಂಡಕ್ಕೆ ಹೊರಟೆವು.

ಗೌರೀಕುಂಡದಿಂದ ತ್ರಿಜುಗೀ ನಾರಾಯಣಕ್ಕೆ ಒಂದು ದಾರಿ ಹೋಗಿದೆ. ಆದರೆ ನಾವು ಆ ದಾರಿಯನ್ನು ಬಿಟ್ಟು ಸರಳ ದಾರಿಯಿಂದ

**ಊಖೀಮಠ**

ನಾಲಾಚಟ್ಟಿಯ ವರೆಗೆ ಬಂದು ಅಲ್ಲಿಂದ ಬದರಿಯ ದಾರೀ ಹಿಡಿದೆವು. ಸ್ವಲ್ಪ ದಾರೀ ನಡೆದ ಮೇಲೆ ಗುಪ್ತಕಾಶಿಯೆದುರಿಗಿರುವ ಊಖೀಮಠಕ್ಕೆ ಮುಟ್ಟಿದೆವು. ಕೇದಾರನಾಥನು ಬರ್ಫಿನಲ್ಲಿ ಮುಳುಗಿದಾಗ ಸುಮಾರು ಆರು ತಿಂಗಳು ಊಖೀಮಠದಲ್ಲಿಯೇ ಕೇದಾರನಾಥನ ಪೂಜೆ ನಡೆಯುವುದು. ಇಲ್ಲಿಯ ಗುಡಿಯಲ್ಲಿ ಕೇದಾರನಾಥ, ಬದರೀನಾಥ, ತುಂಗನಾಥ ಮೊದಲಾದ ಅನೇಕ ಮೂರ್ತಿಗಳಿವೆ. ಇಲ್ಲಿಯ ಪೂಜಾರಿಯ ಮನೆಯೂ ಪಂಚಮುಖಿ ಮಹಾದೇವರ ಮೂರ್ತಿಯೂ ನೋಡತಕ್ಕಂಥವುಗಳಿವೆ. ಇಲ್ಲಿ ದವಾ

ಖಾನೆ, ಪೋಸ್ಟಆಫೀಸ, ಪೋಲೀಸಚೌಕಿಗಳಿರುತ್ತವೆ. ಪಂಚ ಕೇದಾರಗಳಲ್ಲೊಂದಾದ ಮಧ್ಯಮೇಶ್ವರವು ಇಲ್ಲಿಂದ ೧೫ ಮೈಲಿನ ಮೇಲೆ ಅಡ್ಡದಾರಿಯಲ್ಲಿದೆ.

ಊಖೀ ಮಠದಿಂದ ೨॥ ಮೈಲು ದಿನ್ನಿಯನ್ನೇರಿ ಹೋದ ಬಳಿಕ ಗಣೇಶಚಟ್ಟಿ, ೪॥ ಮೈಲಿನ ಮೇಲೆ ದುರ್ಗಾಚಟ್ಟಿ, ೬॥ ಮೈಲಿನ ಮೇಲೆ ಪೋಥಿಬಾ ಚಟ್ಟಿಗಳಿವೆ. ಮಾರ್ಗದಲ್ಲಿ ನೀರಿನ ಅನೇಕ ಝುರಿಗಳಿವೆ. ದಟ್ಟಡವಿಯಿಂದ ಕೂಡಿದ ಸುಂದರ ವನವಿದೆ. ಈ ಅಡವಿಯಲ್ಲಿ ಕರಡಿಗಳ ಭಯ ಬಹಳ. ಪೋಥಿಬಾ ಚಟ್ಟಿಯಲ್ಲಿ ವಾಸಮಾಡಲು ಉತ್ತಮ ವ್ಯವಸ್ಥೆಯಿದೆ. ಅಂಗಡಿಗಳಲ್ಲಿ ಬೇಕಾದ ಸಾಮಾನುಗಳು ಸಿಕ್ಕುತ್ತವೆ. ಇಲ್ಲಿಂದಲೇ ತುಂಗನಾಥದ ಚಳಿಯು ಸುರುವಾಗುತ್ತದೆ. ಪೋಥಿಬಾ ಚಟ್ಟಿಯಿಂದ ೨ ಮೈಲು ಕುಂದನಚಟ್ಟಿ, ೨॥ ಮೈಲು ಚಾಪತ್ರಾ ಚಟ್ಟಿಯಿವೆ. ಈ ಚಟ್ಟಿಗೆ ಹೋಗುವಾಗ ಮಾರ್ಗದಲ್ಲಿ ಏರಿಯಿದ್ದು ಸ್ವಲ್ಪ ದೂರ ಹೋದ ಮೇಲೆ ಎಡಕ್ಕೆ ತುಂಗನಾಥಕ್ಕೂ ಬಲಕ್ಕೆ ಚಪೋಲಿಗೂ ಮಾರ್ಗಗಳು ಒಡೆದಿವೆ.

ಪೋಥಿಬಾ ಚಟ್ಟಿ

ನಾವು ಈ ಯಾತ್ರೆಗೆ ಹೋದಾಗ ಮಾರ್ಗದಲ್ಲಿ ಬಹಳ ಬರ್ಫ ಬಿದ್ದುದರಿಂದ ಚಟ್ಟಿಗಳಾವವೂ ಇನ್ನೂ ತೆರೆದಿರಲಿಲ್ಲ. ನಮ್ಮ ಹತ್ತಿರ ಸ್ವಲ್ಪ ಸಾಮಾನುಗಳಿದ್ದುದರಿಂದ ಉಪವಾಸ ಬೀಳುವ ಪ್ರಸಂಗ ಬರಲಿಲ್ಲ. ಕೇದಾರನಾಥದ ಏರಿಗಿಂತ ಈ ಏರಿಯು ಬಹಳ ಕಠಿಣವಾದ್ದರಿಂಪ ಅನೇಕರು ಈ ಯಾತ್ರೆಗೆ ಹೋಗುವದಿಲ್ಲ. ನಾವಾದರೂ ಹಾದೀತಪ್ಪಿ ಈ ಮಾರ್ಗ ಹಿಡಿದದ್ದರಿಂದ ಬಹಳ ಕಷ್ಟವನ್ನನುಭವಿಸಬೇಕಾಯಿತು. ನಾವು ಇಲ್ಲಿಗೆ ಹೋದಾಗ ಶಿಖರವು ಇನ್ನೂ ಬರ್ಫಾಚ್ಛಾದಿತವಾಗಿದ್ದಿತು. ಬರ್ಫಿನ ಮಳೆ ಸುರಿಯುತ್ತಿದ್ದುದರಿಂದ ಕಾಲುಗಳು ಒಂದೇ ಸವನೇ ಜಾರುತ್ತಿದ್ದವು. ಅಂತೂ ಬಹಳ ಪ್ರಯಾಸದಿಂದ ರಾತ್ರಿ ೯ ಗಂಟೆಗೆ ತುಂಗನಾಥಕ್ಕೆ ಮುಟ್ಟಿದೆವು. ಆದರೆ ಅಲ್ಲಿಯ ಸ್ವರ್ಗೀಯ ನೋಟವನ್ನು ನೋಡಿದ ಕೂಡಲೇ ಇಷ್ಟೊತ್ತಿನವರೆಗೆ

ತುಂಗನಾಥ ೧೬೦೦೦ ಫೂಟು
[೩ನೇ ಕೇದಾರ]

ಪಟ್ಟ ಶ್ರಮದ ಪರಿಹಾರವಾಯಿತು. ಈ ದೃಶ್ಯವನ್ನು ಸ್ವಲ್ಪದರಲ್ಲಿಯೇ ವರ್ಣಿಸುವೆನು.

ತುಂಗನಾಥದ ಸ್ವರ್ಗೀಯ ದೃಶ್ಯ.

ನಾವು ತುಂಗನಾಥವನ್ನು ಮುಟ್ಟಿದಾಗ ೯ ಗಂಟೆ ರಾತ್ರಿಯಾಗಿದ್ದರೂ ಆಗ ಸ್ವಲ್ಪ ಬೆಳಕಿದ್ದಿತು. ಮುಂದೆ ಶುಭ್ರವಾದ ಬೆಳದಿಂಗಳು ಬಿದ್ದಿತ್ತು. ಇಲ್ಲಿನ ಪರ್ವತಗಳ ಸೌಂದರ್ಯವು ಮಿಗಿಲಾಗಿದ್ದಿತು. ಸಾವಿರಾರು ಅಡಿಗಳ ಕೆಳಗೆ ಗುಡುಗು ಮಿಂಚುಗಳೊಡನೆ ಮಳೆಗರೆಯುತ್ತಿದ್ದ ಮೋಡಗಳು ಕಂಗೊಳಿಸುತ್ತಿದ್ದವು. ಉತ್ತರಕ್ಕೆ ನೂರಾರು ಮೈಲುಗಳವರೆಗೆ ಶುಭ್ರವಾದ ಪರ್ವತಗಳೂ ದಕ್ಷಿಣಕ್ಕೆ ದಿನ್ನೆಗಳಂತೆ ತೋರುವ ೫-೬ ಸಾವಿರ ಅಡಿ ಎತ್ತರದ ಪರ್ವತಗಳೂ ಒಪ್ಪುತ್ತಿದ್ದವು. ಒಂದು ಕಡೆ ಎರೆಭೂಮಿಯಂತೆ ಕಪ್ಪಾದ ಮೋಡಗಳು ನೋಡುವವರ ಕಣ್ಣುಗಳಿಗೆ ಸೊಬಗನ್ನು ಬೀರುತ್ತಿದ್ದವು. ಈ ಪ್ರಕಾರದ ಸೃಷ್ಟಿಸೌಂದರ್ಯವನ್ನು ನೋಡುತ್ತ ಅಂದಿನ ರಾತ್ರಿಯನ್ನೆಲ್ಲ ಕಳೆದೆವು. ನಾವು ತುಂಗನಾಥಕ್ಕೆ ಹೋದಾಗ ಅಲ್ಲಿನ ಧರ್ಮಶಾಲೆ ಚಟ್ಟಿಗಳೆಲ್ಲವೂ ಬರ್ಫಿನಿಂದ ಮುಚ್ಚಿದ್ದವು. ಬರ್ಫಿನ ಭಾರದಿಂದ ಒಂದು ಕೋಣೆಯು ಮುರಿದು ಬಿದ್ದಿದ್ದಿತು. ಆ ಕಿಡಿಕಿಯೊಳಗಿಂದ ಕೆಳಕ್ಕೆ ಜಿಗಿದು ಮೇಣಬತ್ತಿಯನ್ನು ಹಚ್ಚಿ ಆ ಕೋಣೆಯ ಕಟ್ಟಿಗೆ ಭುಜಪತ್ರಗಳಿಂದಲೇ ಬೆಂಕಿಯನ್ನು ಹೊತ್ತಿಸಿದೆವು. ಬರ್ಫಿನ ಮಳೆಯು ಒಂದೇ ಸವನೇ ಬೀಳುತ್ತಿದ್ದಿತು. ನೋಡನೋಡುವಷ್ಟರಲ್ಲಿ ಒಂದು ಫೂಟು ಎತ್ತರದ ಬರ್ಫು ಬಿದ್ದಿತು. ನಮಗೆ ಚಳಿ ಬಹಳ ಹತ್ತಿದ್ದರಿಂದ ಉರಿ ಕಾಸಿಕೊಂಡೆವು. ಬರ್ಫು ಕರಗಿಸಿ ನೀರು ಕುಡಿದೆವು. ಮರುದಿನ ಪ್ರಾತಃಕಾಲ ಬರ್ಫಿನ ನೀರಿನಿಂದಲೇ ಪ್ರಾತರ್ವಿಧಿ ತೀರಿಸಿಕೊಂಡು ಬರ್ಫ ಕರಗುವ ವರೆಗೆ ಅಂದರೆ ಸುಮಾರು ೨ ಗಂಟೆಯ ವರೆಗೆ ದಾರೀಕಾದು ದೇವರ ದರ್ಶನಕ್ಕೆ ಹೋದೆವು. ದೇವರ ಬಾಗಿಲು ತೆರೆದದ್ದರಿಂದ ದೇವದರ್ಶನಕ್ಕೆ ತೊಂದರೆಯಾಗಲಿಲ್ಲ. ಅನಂತರ ಬಹಳ ಪ್ರಯಾಸದಿಂದ ಬರ್ಫಿನೊಳಗಿಂದ ದಾರಿತೆಗೆದು ಮುಂದಕ್ಕೆ ತೆರಳಿದೆವು. ೧-೨ ಫರ್ಲಾಂಗು ಕಠಿಣ ಕೊಳ್ಳದಲ್ಲಿ ಬರ್ಫಿನ ದಾರಿಯನ್ನು ದಾಟಿ ಮುಂದೆ

ಕಾಲುದಾರಿಯಿಂದ ಒಂದೆರಡು ಮೈಲು ಹೋದ ಬಳಿಕ ಒಬ್ಬ ಕುರುಬನು ಭೆಟ್ಟಿಯಾದನು. ಅವನು ದಾರಿಯನ್ನು ತೋರಿಸಿದನು. ಹೀಗೆ ದಾರಿ ನಡೆಯುತ್ತ ಪಾಂಗರ ಚಟ್ಟಿಗೆ ತಲ್ಪಿದೆವು. ಇಲ್ಲಿ ಬದರಿಯ ದಾರಿಯು ಬಂದು ಕೂಡುತ್ತಿದ್ದು ಒಂದು ಧರ್ಮಶಾಲೆ ಅಂಗಡಿಗಳಿವೆ. ಆದರೆ ಅವೂ ಇನ್ನೂ ತೆರೆಯದ್ದರಿಂದ ಮುಂದಕ್ಕೆ ಪ್ರಯಾಣ ಬೆಳೆಸಿ ಮಂಡಲಚಟ್ಟಿಗೆ ಹೋಗಿ ಅಲ್ಲಿಳಿದುಕೊಂಡೆವು. ಸಂಜೆಯ ವರೆಗೆ ಮಂಡಲಚಟ್ಟಿಯಲ್ಲಿಯೇ ವಿಶ್ರಮಿಸಿದೆವು. (ಮಂಡಲಚಟ್ಟಿಯಿಂದ ೧೨ ಮೈಲಿನ ಮೇಲೆ ರುದ್ರನಾಥವಿದೆ.) ಅನಂತರ ಮಂಡಲಚಟ್ಟಿಯಿಂದ ಗೋಪೇಶ್ವರಕ್ಕೆ ಹೊರಟೆವು. ಮಾರ್ಗವು ದಟ್ಟಡವಿಯಲ್ಲಿದ್ದು ಸೂರ್ಯಪ್ರಕಾಶವು ಕೂಡ ಕಾಣುವದಿಲ್ಲವಾದ್ದರಿಂದ ದಾರಿ ನಡೆಯುವಾಗ ಒಂದು ಪ್ರಕಾರದ ಭಯವುಂಟಾಗುತ್ತಿತ್ತು. ಇಲ್ಲಿ ೪॥ ಮೈಲಿನ ಮೇಲೆ ವೀರಭದ್ರಚಟ್ಟಿಯಿದೆ. ರಾತ್ರಿಯನ್ನೆಲ್ಲ ವೀರಭದ್ರಚಟ್ಟಿಯಲ್ಲಿ ಕಳೆದು ಬೆಳಿಗ್ಗೆ ಇಲ್ಲಿಂದ ೨ ಮೈಲು ದೂರ ಇರುವ ಗೋಪೇಶ್ವರಕ್ಕೆ ತಲ್ಪಿದೆವು.

**ಗೋಪೇಶ್ವರ**

ಈ ಮಾರ್ಗದಲ್ಲಿ ಹತ್ತುವ ಗ್ರಾಮಗಳಲ್ಲಿ ಊಖೀಮಠವನ್ನು ಬಿಟ್ಟರೆ ಗೋಪೇಶ್ವರವೇ ದೊಡ್ಡದು. ಇಲ್ಲೊಂದು ಧರ್ಮಶಾಲೆ ೩೦೦ – ೪೦೦ ಮನೆಗಳು, ಕೆಲವು ಅಂಗಡಿಗಳಿವೆ. ಗೋಪೇಶ್ವರ, ಚಂಡಿ ಮಂದಿರಗಳಿವೆ. ಇಲ್ಲಿಂದ ಎರಡು ಮೈಲುಗಳ ಮೇಲೆ ಚಮೋಲಿಯಿದೆ. ಬಹುತರವಾಗಿ ಯಾತ್ರಿಕರು ಗೋಪೇಶ್ವರದಲ್ಲುಳಿಯದೆ ಚಮೋಲಿಗೆ ಪ್ರಯಾಣ ಬೆಳೆಸುವರು.

**ಚಮೋಲಿ**

ಇದು ತಾಲೂಕಿನ ಸ್ಥಳವು. ರುದ್ರಪ್ರಯಾಗದಿಂದ ಕೇದಾರ ಬಿಟ್ಟು ಬದರಿಗೆ ಹೋಗುವ ದಾರಿಯು ಇಲ್ಲಿ ಬಂದು ಕೂಡುತ್ತದೆ. ಇಲ್ಲಿ ಪೋಸ್ಟ್ ತಾರ ಕಚೇರಿಗಳೂ, ಧರ್ಮಶಾಲೆ, ಮುಶಾಫರಿ ಬಂಗ್ಲೆಗಳೂ ದವಾಖಾನೆಯೂ ಇವೆ. ದೊಡ್ಡ ಪೇಟೆಯಿದ್ದುದರಿಂದ ಎಲ್ಲ ಸಾಮಾನುಗಳು ಸಿಕ್ಕುತ್ತವೆ. ಕೇದಾರದಿಂದ ಇಲ್ಲಿಗೆ ಬರಬೇಕಾದರೆ ನಡುವೆ ಅಲಕನಂದಾ ನದಿಯ ಜೋತಾಡುವ ಪೂಲು ದಾಟಬೇಕಾಗುತ್ತದೆ. ನನ್ನ ಸಂಗಡಿಗರು ಮೂರು ದಿನ ಇಲ್ಲಿಯೇ

ಇರಲು ಬಯಸಿದ್ದರಿಂದ ಸ್ನಾನ ಭೋಜನಾದಿಗಳನ್ನು ತೀರಿಸಿ ಮರು ದಿನ ಪ್ರಾತಃಕಾಲಕ್ಕೆ ನಾನೊಬ್ಬನೇ ಮುಂದಕ್ಕೆ ಹೊರಟೆನು. ಆಗ ಮೈಸೂರಿನ ಮಹಾರಾಜರು ತಮ್ಮ ಪರಿವಾರದೊಂದಿಗೆ ಬದರೀಯಾತ್ರೆಗೆ ಹೊರಟಿದ್ದರು. ಅವರಲ್ಲಿ ನನಗೆ ಕೆಲವು ಜನರ ಗುರುತಾಯಿತು. ಇಲ್ಲಿಂದ ಬಾನೀಚಟ್ಟಿ ೪ ಮೈಲು, ಹಾಟೀಚಟ್ಟಿ ೭ ಮೈಲು, ಪೀಪಲ ಕೋಟಿ ೯ ಮೈಲಿನ ಮೇಲೆ ಇವೆ. ಪೀಪಲಕೋಟಿಯು ದೊಡ್ಡ ಗ್ರಾಮವಾಗಿದೆ. ಇಲ್ಲಿ ದೊಡ್ಡ ಪೇಟೆಯಿದ್ದು ಸ್ಟೇಶನರಿ ಸಾಮಾನು ಗಳು, ಶಿಲಾಜಿತ, ಕಸ್ತೂರಿ, ಚವರಿಕೂದಲು ಮುಂತಾದ ಸಾಮಾನು ಗಳು ಸಿಕ್ಕುತ್ತವೆ. ಸಮೀಪದ ಗುಡ್ಡದಲ್ಲಿ ಪಾಟಿಯ ಕಲ್ಲುಗಳು ಸಿಕ್ಕು ತ್ತವೆ. ಇಲ್ಲಿಂದ ೩॥ ಮೈಲು ಕಠಿಣವಾದ ಏರಿ ಹತ್ತಿ ಗರುಡ ಗಂಗಾಕ್ಕೆ ಮುಟ್ಟಿದೆನು.

ಇಲ್ಲಿ ಇದೇ ಹೆಸರಿನ ನದಿಯಿದೆ. ಮನೆಗಳಲ್ಲಿ ಸರ್ಪಗಳು ಬರ ಬಾರದೆಂದು ಜನರು ಈ ನದಿಯೊಳಗಿನ ಕಲ್ಲುಗಳನ್ನು ಮನೆಯಲ್ಲಿಡುವ ರೂಢಿಯಿದೆ. ಇಲ್ಲಿಂದ ೧॥ ಮೈಲಿನ ಮೇಲೆ ದೇವ

ಗರುಡಗಂಗಾ

ದಾರುಚಟ್ಟಿ (ಇದರ ಗುಡ್ಡದ ಮೇಲೆ ದೇವದ್ವಾರ ಗಿಡಗಳಿವೆ) ೩। ಮೈಲಿನ ಮೇಲೆ ಪಾತಾಲಗಂಗಾ, ೫ ಮೈಲಿನ ಮೇಲೆ ಗುಲಾಬಕೋಟಿಚಟ್ಟಿಯಿವೆ. ಮುಂದೆ ೨। ಮೈಲಿನ ಮೇಲೆ ಕುಂಭಾರ ಚಟ್ಟಿ, ೨॥ ಮೈಲಿನ ಮೇಲೆ ಪೈನೀಚಟ್ಟಿ, ೪ ಮೈಲಿನ ಮೇಲೆ ಜೋಶೀ ಮಠವಿವೆ. ಕುಂಭಾರಚಟ್ಟಿಯಿಂದ ಅಲಕನಂದಾದ ಎರಡನೆಯ ದಂಡೆಗೆ ಉರ್ಜಿಮ ಹಳ್ಳಿಯಿದು ಅಲ್ಲಿ ಪಂಚಬದರಿಗಳಲ್ಲೊಂದಾದ ಆದಿಬದರಿ ಯಿದೆ. ಅಲ್ಲಿಂದ ೨ ಮೈಲಿನ ಮೇಲೆ ಪಂಚಕೇದಾರಗಳಲ್ಲೊಂದಾದ ಕಲ್ಪೇಶ್ವರವಿರುತ್ತದೆ. ಆದರೆ ಈ ಸ್ಥಳಗಳು ಅಡ್ಡ ದಾರಿಯಲ್ಲಿದ್ದುದ ರಿಂದ ಇಲ್ಲಿಗೆ ಹೋದವರು ಪುನಃ ಕುಂಭಾರಚಟ್ಟಿಗೆ ಬರಬೇಕಾಗು ತ್ತದೆ. ಪೈನೀಮಠದಲ್ಲಿ ವೃದ್ಧ ಬದರೀ ಗುಡಿಯಿದೆ. ಆದರೆ ಅಲ್ಲಿ ಹೋಗಲು ಮಾರ್ಗವಿಲ್ಲ. ಪೈನಿಯಿಂದ ೪। ಮೈಲು ದಾರಿ ನಡೆದ ಮೇಲೆ ಜೋಶೀಮಠವಿದೆ.

ಶ್ರೀಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಜೋಶೀಮಠ ಒಂದು. ಬದರೀ ಮಂದಿರವು ಬರ್ಫಿನಲ್ಲಿ ಮುಚ್ಚಿದಾಗ ೬ ತಿಂಗಳು ನಾರಾಯಣನ ಪೂಜೆ ಇಲ್ಲಿಯೇ ಆಗುತ್ತಿದೆ. ಊಖೀಮಠದಂತೆ ಇಲ್ಲಿಯೂ ಬದರೀ ನಾರಾಯಣನ ಪೂಜಾರಿಗಳಿರುತ್ತಾರೆ. ಇಲ್ಲಿ ನೃಸಿಂಹ ದೇವರ ಗುಡಿಯಿದೆ. ಶಂಕರಮಠ, ವಾಸುದೇವ ಮಂದಿರಗಳಲ್ಲಿರುವ ಎಷ್ಟೋ ಮೂರ್ತಿಗಳು, ಎದುರಿಗಿರುವ ದಂಡಧಾರವೆಂಬ ಉತ್ತಮ ಸೆಲೆಯ ಕುಂಡ ಇವು ಪ್ರೇಕ್ಷಣೀಯವಾಗಿವೆ. ಇಲ್ಲಿಯೂ ಎಲ್ಲ ಸಾಮಾನುಗಳು ಸಿಕ್ಕುತ್ತವೆ. ಧರ್ಮಶಾಲೆ, ಮುಶಾಫರಿ ಬಂಗ್ಲೊ, ಪೋಸ್ಟ, ತಾರು ಕಚೇರಿಗಳಿವೆ. ಇಲ್ಲಿಂದ ೧॥ ಮೈಲಿನ ಮೇಲೆ ಇಳುಕಲಿನಲ್ಲಿ ವಿಷ್ಣುಪ್ರಯಾಗವಿದೆ.

ಜೋಶೀಮಠ

ಇಲ್ಲಿ ವಿಷ್ಣು – ಗಂಗಾ ಅಲಕನಂದಾ ನದಿಗಳ ಸಂಗಮವಿದೆ. ವಿಷ್ಣುವಿನ ಗುಡಿ, ಬದರೀನಾಥನ ಮೂರ್ತಿ, ಬೇರೆ ಕೆಲವು ಮೂರ್ತಿಗಳಿವೆ. ನದಿಯ ಪೂಲು ದಾಟಿದ ಮೇಲೆ ಚಟ್ಟಿಯುಂಟು. ಇದು ಪಂಚಪ್ರಯಾಗಗಳಲ್ಲೊಂದಾಗಿದೆ. ಇಲ್ಲಿಂದ ೪॥ ಮೈಲು ಘಾಟಚಟ್ಟಿ, ೬। ಮೈಲಿನ ಮೇಲೆ ಪಾಂಡುಕೇಶ್ವರ ಇವೆ. ಪಾಂಡುಕೇಶ್ವರದಲ್ಲಿ ಯೋಗಬದರೀ ಗುಡಿ, ವಾಸುದೇವನ ಗುಡಿ, ಅನೇಕ ತಾಮ್ರಶಾಸನಗಳಿವೆ. ಇದು ಪಂಚ – ಬದರಿಗಳಲ್ಲೊಂದಾಗಿದೆ. ಮೈಸೂರು ಮಹಾರಾಜರ ಪುರೋಹಿತರು ತಮ್ಮಲ್ಲುಳಿಯಲು ನನಗೆ ಬಹಳ ಆಗ್ರಹ ಮಾಡಿದ್ದರಿಂದ ನಾನು ಅವರಲ್ಲಿಯೇ ಉಳಿದೆನು. ಆಗ ಮಹಾರಾಜರ ಪರಿವಾರದ ಮುಖ್ಯ ಮುಖ್ಯ ಜನರ ಪರಿಚಯವಾಯಿತು.

ವಿಷ್ಣುಪ್ರಯಾಗ

ಪಾಂಡುಕೇಶ್ವರದಿಂದ ೨॥ ಮೈಲಿನ ಮೇಲೆ ಲಾಭವಗಢಚಟ್ಟಿ, ೬ ಮೈಲಿನ ಮೇಲೆ ಹನುಮಾನ ಚಟ್ಟಿಯಿವೆ. ಇವೆರಡರ ನಡುವೆ ಅನೇಕ ನೀರಿನ ಝುರಿಗಳು, ಗಿಡಬಳ್ಳಿಗಳಿದ್ದು ಸೃಷ್ಟಿ ಸೌಂದರ್ಯವು ಬಹಳ ಮನೋಹರವಾಗಿದೆ. ಗುಡ್ಡಗಾಡ ಜನರು ಇಲ್ಲಿಂದಲೇ ಬದರಿಗೆ ಕಟ್ಟಿಗೆಗಳನ್ನು ಒಯ್ಯುತ್ತಾರೆ. ಇಲ್ಲಿಂದ ಗಿಡಗಳು ಕಡಿಮೆಯಾಗಿ ಬರ್ಫಿನ ಪರ್ವತಗಳೇ ಹೆಚ್ಚಾಗುತ್ತ

ಹನುಮಾನ ಚಟ್ಟಿ

ನಡೆದಿವೆ. ಮಾರ್ಗವಲ್ಲಿ ಹೆಪ್ಪುಗಟ್ಟಿದ ನದಿಗಳಿವೆ. ಬರ್ಫು ಕರಗಿ ಹೋಗುವವರೆಗೆ ಇಲ್ಲಿಯ ದಾರಿ ನಡೆಯುವದು ಬಹಳ ಕಠಿಣ. ಮೈಸೂರು ಮಹಾರಾಜರು ಕೊನೆಯ ವರೆಗೂ ನಡೆಯುತ್ತಲೇ ಬಂದರು. ಮಹಾರಾಜರ ಆದರಾತಿಥ್ಯದ ವ್ಯವಸ್ಥೆಯನ್ನು ಟಿಹರೀ ಸರಕಾರದವರು ಬಹಳ ಚನ್ನಾಗಿಟ್ಟಿದ್ದರು.

ಶ್ರೀ ಬದರೀ ನಾರಾಯಣನ ಕೃಪೆಯಿಂದ ೨೫೦ ಮೈಲುಗಳ ದುರ್ಗಮವಾದ ದಾರಿ ನಡೆದು ಸುರಕ್ಷಿತವಾಗಿ ಇಲ್ಲಿಗೆ ಬಂದು ಮುಟ್ಟಿದೆನು. ಇಲ್ಲಿಗೆ ಸಾಮಾನುಗಳನ್ನೆಲ್ಲ ಕುರಿಗಳ ಮೇಲೆ

ಶ್ರೀ ಬದರೀನಾಥ (೧೦೫೦೦ ಫೂಟು)

ತರಬೇಕಾಗುವದರಿಂದ ಬಹಳ ತುಟ್ಟಿ ಬೀಳುತ್ತವೆ. ಆದರೂ ಇಲ್ಲಿ ಅವಶ್ಯವಾದ ಎಲ್ಲ ಸಾಮಾನುಗಳು ಸಿಕ್ಕುವವು. ಈ ಸ್ಥಾನವು ಬರ್ಫಿನಿಂದ ಸುತ್ತಲ್ಪಟ್ಟಿದ್ದು ಎಲ್ಲಕ್ಕೂ ಎತ್ತರವಾದ ಶಿಖರವು ೨೩೦೦೦ ಫೂಟು ಇದೆ. ಬದರೀನಾಥನ ಮಂದಿರವು ಅಲಕನಂದಾ ನದಿಯ ದಂಡೆಗಿದ್ದು ಕಾರ್ತಿಕದಿಂದ ವೈಶಾಖದ ವರೆಗೆ ಬರ್ಫಿನಲ್ಲಿ ಮುಳುಗಿರುತ್ತದೆ. ಮಂದಿರದ ಕೆಳಗಡೆ ಅನೇಕ ಪಾವಟಿಗೆಗಳನ್ನಿಳಿದು ಋಷಿಗಂಗಾ, ಕೂರ್ಮಧಾರಾ, ಪ್ರಲ್ಹಾದ ಧಾರಾ, ತಪ್ತಕುಂಡ, ನಾರದಕುಂಡಗಳೆಂಬ ಪಂಚತೀರ್ಥಗಳಿಗೆ ಹೋಗಬೇಕಾಗುತ್ತದೆ. ಗುಡಿಯಿಂದ ೪೦೦ ಯಾರ್ಡಿನ ಮೇಲೆ ಬ್ರಹ್ಮಕಪಾಲವಿದೆ. ಪಿತೃಗಳಿಗೆ ಪಿಂಡಾದಿಗಳನ್ನು ಕೊಡುವದು ಇಲ್ಲಿಯೇ. ಬದರೀ ನಾರಾಯಣನಿಗೆ ಸಮರ್ಪಿತವಾದ ಅನ್ನದಿಂದಲೇ ಬ್ರಹ್ಮಕಪಾಲದಲ್ಲಿ ಪಿಂಡವನ್ನು ಕೊಡಬೇಕಾಗುತ್ತದೆ. ತಪ್ತಕುಂಡದಲ್ಲಿ ಎಸರು ನೀರು ಗೋಮುಖವಾಗಿ ಬೀಳುತ್ತದೆ. ಕುಂಡವು ತುಂಬಿದ ಮೇಲೆ ಆ ಬಿಸಿನೀರು ಮುಂದಕ್ಕೆ ಹರಿದು ಹೋಗುತ್ತದೆ. ಪಂಚತೀರ್ಥಗಳಂತೆ ನಾರದಶಿಲಾ, ವರಾಹಶಿಲಾ, ಮಾರ್ಕಂಡೇಯಶಿಲಾ, ನೃಸಿಂಹಶಿಲಾ, ಮತ್ತು ಗರುಡಶಿಲೆಗಳೆಂಬ ಪಂಚ ಶಿಲೆಗಳೂ ಪ್ರಸಿದ್ಧವಿವೆ. ನದಿಯ ದಂಡೆಗುಂಟ ಇವೆಲ್ಲ ಶಿಲೆಗಳಿರುತ್ತವೆ.

ಬದರಿಯಿಂದ ೨। ಮೈಲಿನ ಮೇಲೆ ವಸುಧಾರಾ ತೀರ್ಥವಿದೆ. ಉನ್ನತವಾದ ಪರ್ವತದ ಶಿಖರದಿಂದ ನೀರು ಕೆಳಗೆ ಬೀಳುತ್ತದೆ.

ವಸುಧಾರಾ

ಬರ್ಫ ಕರಗಿದ ಮೇಲೆ ಮಾನಸಸರೋವರದ ಕಡೆಯಿಂದ ತಿಬೇಟದ ಜನರು ಇಲ್ಲಿಗೆ ಬರುತ್ತಾರೆ. ಬದರೀನಾಥನ ಬಾಗಿಲವು ವೈಶಾಖ ಶುದ್ಧ ಪ್ರತಿಪದೆಯ ದಿನ ತೆಗೆಯುತ್ತದೆ. ಆ ದಿನ ದೀಪ ದರ್ಶನಕ್ಕಾಗಿ ಬಹಳ ಗದ್ದಲವಾಗುತ್ತದೆ. ಗುಡಿಯೆಲ್ಲ ಬರ್ಫದಲ್ಲಿ ಮುಚ್ಚಲ್ಪಟ್ಟಾಗ್ಗೆ ೬ ತಿಂಗಳು ಈ ದೀಪವು ಹಾಗೆ ಉರಿಯುತ್ತದೆ. ಜನರು ಈ ದೀಪದ ದರ್ಶನ ತಕ್ಕೊಂಡು ತಟ್ಟೆಯಲ್ಲಿ ರೂಪಾಯಿ ಬೆಳ್ಳಿ ಬಂಗಾರದ ಆಭರಣಗಳನ್ನು ಹಾಕುತ್ತಾರೆ. ಕಿರಿಬೆರಳು ಹೋಗುವಷ್ಟು ೮-೧೦ ಫೂಟು ಉದ್ದ ಇದ್ದ ಒಂದು ಚೀಲವಿದ್ದು ಅದನ್ನು ಕರಗಿದ ತುಪ್ಪದಲ್ಲಿ ಒಗೆಯುತ್ತಾರೆ. ತುಪ್ಪವು ಆರಿತೆಂದರೆ ಅದು ಗಟ್ಟಿಯಾಗುತ್ತದೆ. ಆದನ್ನು ಸುತ್ತಿಟ್ಟು ಒಂದು ಬದಿಗೆ ದೀಪ ಹಚ್ಚಿ ಆದನ್ನು ಎಣ್ಣೆಯ ತಟ್ಟೆಯಲ್ಲಿಡುತ್ತಾರೆ. ಶ್ರೀಬದರೀನಾಥನ ಮಂದಿರದಲ್ಲಿ ಬದರೀನಾಥ, ಲಕ್ಷ್ಮೀ, ನರನಾರಾಯಣರು, ಕುಬೇರ, ಗಣಪತಿ ಗರುಡ, ಉದ್ಧವ, ನಾರದ ಇಷ್ಟು ಮೂರ್ತಿಗಳಿವೆ. ಲಕ್ಷ್ಮಿಯ ಗುಡಿಯ ಹತ್ತರ ಒಂದು ಕೋಣೆಯಿದ್ದು ಅಲ್ಲಿ ಪೂಜೆಯ ಸಾಹಿತ್ಯ ಮತ್ತು ಪಾತ್ರೆ ಮುಂತಾದವುಗಳನ್ನಿಡುತ್ತಾರೆ. ಇಲ್ಲಿಯ ಪೂಜಾರಿಯು ನಂಬೂರಿಯ ಬ್ರಾಹ್ಮಣನು; ಇವನಿಗೆ ರಾವಣ ಎನ್ನುತ್ತಾರೆ. ಈ ಪೂಜಾರಿಯ ಮನೆ ಬೋಸಿಮಠದಲ್ಲಿದೆ. ಬ್ರಹ್ಮಕಪಾಲದಲ್ಲಿ ಪಿಂಡಪ್ರದಾನ ಮಾಡಿ ಮಹಾರಾಜರ ಪರಿವಾರದ ಸಂಗಡಲೇ ನಾನೂ ಹೊರಟೆನು. ಮಹಾರಾಜರು ಬದರೀನಾಥನಿಗೆ ಸಾವಿರಾರು ರೂಪಾಯಿಗಳ ಆಭರಣಗಳನ್ನು ಕೊಟ್ಟದ್ದಲ್ಲದೆ ಆನೇಕ ದಾನ ಧರ್ಮಗಳನ್ನು ಮಾಡಿದರು. ಒಟ್ಟಿಗೆ ಸುಮಾರು ೨೦ ಸಾವಿರ ರೂಪಾಯಿ ವೆಚ್ಚ ಮಾಡಿರಬಹುದಾಗಿ ತೋರುತ್ತದೆ. ಬದರಿಯಿಂದ ನಾನು ಖಾಟಗೋದಾಮಿಗೆ ಹೊರಟೆನು.

ಬದರಿಯಿಂದ ಚಮೋಲಿಯ ವರೆಗೆ ಅದೇ ಮಾರ್ಗದಿಂದ ಬಂದ ಬಳಿಕ ಮುಂದೆ ಕೇದಾರ ಮಾರ್ಗ ಬಿಟ್ಟು ಕರ್ಣಪ್ರಯಾಗದ ಮೇಲಿಂದ

ನಂದಪ್ರಯಾಗ

ಖಾಟಗೋದಾಮಿಗೆ ಹೋಗುವ ದಾರಿಯನ್ನು ಹಿಡಿದೆನು. ಚಮೋಲಿಯಿಂದ ಮಚಿಲುಚಟ್ಟಿಯು ೨ ಮೈಲು. ದಾರಿಯಲ್ಲಿ ನೀರಿನ ಝರಿಗಳಿವೆ. ಮುಂದೆ ೭ ಮೈಲಿನ

ಮೇಲೆ ನಂದಪ್ರಯಾಗವಿದೆ. ಕಾಲುನಡಿಗೆಯಿಂದಲೇ ಎಲ್ಲ ಯಾತ್ರೆಯನ್ನು ಮಾಡುವ ಸಂಕಲ್ಪ ಮಾಡಿದ್ದರಿಂದ ಮಹಾರಾಜರ ಪರಿವಾರದವರು ವಿಶೇಷ ಆಗ್ರಹ ಮಾಡಿದರೂ ನಾನು ಕುದುರೆಯ ಮೇಲೆ ಕೂಡ್ರಲಿಲ್ಲ. ನಂದಪ್ರಯಾಗವು ಪಂಚಪ್ರಯಾಗಗಳಲ್ಲೊಂದಾಗಿದೆ. ನಂದಗಂಗಾ ಅಲಕನಂದಾ ನದಿಗಳ ಸಂಗಮಸ್ಥಾನವಿದು. ನಂದಜೀ, ಲಕ್ಷ್ಮೀನಾರಾಯಣ, ದೇವೀಮಂದಿರಗಳಿವೆ. ಇಲ್ಲಿಂದ ೬॥ ಮೈಲಿನ ಮೇಲೆ ಲಿಂಗಾಸು ಚಟ್ಟಿಯಿದೆ. ಈ ಚಟ್ಟಿಯಲ್ಲಿ ಇಳಿಯುಲಿಕ್ಕೆ ಯೋಗ್ಯ ಸ್ಥಳವಿದ್ದು ನೃಸಿಂಹ ಹಾಗೂ ದೇವಿಯ ಮಂದಿರಗಳಿವೆ. ಇಲ್ಲಿಂದ ೬ ಮೈಲಿನ ಮೇಲೆ ಕರ್ಣಪ್ರಯಾಗವಿದೆ.

ಕರ್ಣಪ್ರಯಾಗ

ಕರ್ಣಗಂಗಾ ಮತ್ತು ಅಲಕನಂದಾ ನದಿಗಳ ಸಂಗಮಸ್ಥಾನವಿದು. ಈ ಸ್ಥಾನದಲ್ಲಿ ಕರ್ಣನು ಸೂರ್ಯನನ್ನು ಕುರಿತು ತಪಸ್ಸು ಮಾಡಿದನೆಂದು ಹೇಳುತ್ತಾರೆ. ಕರ್ಣಗಂಗಾದ ಬಲ ಬಾಜುವಿಗೆ ಕರ್ಣನ ಗುಡಿಯೂ ನದಿಯ ದಂಡೆಯಲ್ಲಿ ಕರ್ಣಶಿಲೆಯೂ ಇವೆ. ನದಿಗೆ ಜೋತಾಡುವ ಪೂಲು ಇದೆ. ಎಡ ದಂಡೆಗೆ ಕರ್ಣಪ್ರಯಾಗವಿದೆ. ಇಲ್ಲಿ ಅಂಚೆಕಚೇರಿ ತಂತಿಯ ಕಚೇರಿಗಳಿವೆ. ಧರ್ಮಶಾಲೆಗಳೂ ದೊಡ್ಡ ಪೇಟೆಯೂ ಇವೆ. ಇದು ಪಂಚಪ್ರಯಾಗಗಳಲ್ಲಿ ಒಂದು. ಇಲ್ಲಿಂದ ಒಂದು ದಾರಿ ಹರಿದ್ವಾರಕ್ಕೆ ಹೋಗಿದೆ (೧೧೩ ಮೈಲು) ಮತ್ತೊಂದು ದಾರಿಯು ರಾಮನಗರ (ಖಾಟಗೋದಾಮಿಗೆ) ಕ್ಕೆ ಹೋಗಿದೆ. ರಾಮನಗರಕ್ಕೆ ಹೋಗುವ ಮಾರ್ಗವನ್ನೇ ಈ ಕೆಳಗೆ ಕೊಡುತ್ತೇನೆ. ಕರ್ಣಪ್ರಯಾಗದಿಂದ ೩॥ ಮೈಲಿನ ಮೇಲೆ ಸೇಮಲಚಟ್ಟಿ, ೧೧॥ ಮೈಲಿನ ಮೇಲೆ ಆದಿಬದರಿಗಳಿವೆ.

ಆದಿಬದರಿ

ಇದು ಪಂಚ ಬದರಿಗಳಲ್ಲಿ ಸಮಾವೇಶವಾಗುವದಿಲ್ಲ. ಇಲ್ಲಿ ೧೪ ಗುಡಿಗಳುಂಟು. ಆದಿಬದರಿ, ಅನ್ನಪೂರ್ಣಾ, ಬೂಢಾಕೇದಾರ, ಚಕ್ರಪಾಣಿ ಇವೇ ಮೊದಲಾದವುಗಳು ಮುಖ್ಯ. ಪೋಷ್ಟ ತಾರ ಆಫೀಸ, ಧರ್ಮಶಾಲೆ ಅಂಗಡಿಗಳಿವೆ. ಉತ್ತಮ ನೀರಿನ ಸೆಲೆಯೊಂದಿದೆ. ಇಲ್ಲಿಂದ ೩॥ ಮೈಲು ಜೋಕಾಪಾನೀ ಚಟ್ಟಿಯಿದೆ. ಮುಂದೆ ಸ್ವಲ್ಪ ದೂರದಲ್ಲಿ ನೀರಿನ ಝುರಿಗಳೂ, ದಟ್ಟ

ಡಿವೆಯೂ ಇವೆ. ೧೦ ಮೈಲಿನ ಮೇಲೆ ಗೋಹಡಚಟ್ಟಿ ಇದೆ. ಗೋಹಡಚಟ್ಟಿಯಲ್ಲಿ ಕೆಲವು ಮನೆಗಳು ಪೋಷ್ಟ ಆಫೀಸ ಅವೆ. ಇಲ್ಲಿ ರಾಮಗಂಗಾ ನದಿಯಿದೆ. ಇಲ್ಲಿಂದ ೫॥ ಮೈಲಿನ ಮೇಲೆ ಮೀಲ ಚೌರಿಯಿದೆ. ಹರಿದ್ವಾರದಿಂದ ಹೊರಟ ದಾಂಡಿಯ ವಾಹಕರು ಮೀಲ ಚೌರಿಯಲ್ಲಿ ಬದಲಾಗುತ್ತಾರೆ. ಮುಂದೆ ಬೇರೆ ಮನುಷ್ಯರನ್ನು ಗೊತ್ತು ಮಾಡಿ ಸಾಮಾನುಗಳನ್ನು ಒಯ್ಯಬೇಕಾಗುತ್ತದೆ. ಮೀಲಚೌರಿಯಿಂದ ೩॥ ಮೈಲು ನಾರಾಯಣಚಟ್ಟಿ, ೬ ಮೈಲಿನ ಮೇಲೆ ವೃಷಭಾಚಟ್ಟಿ ೮ ಮೈಲಿನ ಮೇಲೆ ಚಾಖುಟಮಾ (ಗನಮೀ) ಚಟ್ಟಿಯಿವೆ.

ಇದು ದೊಡ್ಡ ಚಟ್ಟಿಯು. ಪೋಷ್ಟ ತಾರ ಆಫೀಸು ಕೆಲವು ಅಂಗಡಿಗಳಿವೆ. ಇಲ್ಲಿಂದ ಒಂದು ಮಾರ್ಗವು ರಾಮನಗರ ಸ್ಟೇಶನಕ್ಕೆ ಮತ್ತೊಂದು ರಾಣೀಖೇಟಿಗೆ ಹೋಗಿದೆ. ಇಲ್ಲಿಂದ

ಗನಮೀಚಟ್ಟಿ

೪। ಮೈಲಿನ ಮೇಲೆ ಮಹಾಕಾಲ ಚಟ್ಟಿ ೭ಮೈಲಿನ ಮೇಲೆ ಘರಾಬ ಚಟ್ಟಿ, ೧೩। ಮೈಲಿನ ಮೇಲೆ ದ್ವಾರಹಾಟವುಂಟು. ದ್ವಾರ ಹಾಟದಲ್ಲಿ ಪೋಷ್ಟ ತಾರ ಆಫೀಸ, ಧರ್ಮಶಾಲೆ ಅಂಗಡಿಗಳಿವೆ. ಇಳಿಯಲು ಯೋಗ್ಯ ಸ್ಥಳಗಳಿವೆ. ದ್ವಾರಹಾಟದಿಂದ ೧೩ ಮೈಲು ರಾಣೀಖೇಟ, ೨। ಮೈಲು ಅಲ್ಮೋರಾ. ದ್ವಾರಹಾಟದಿಂದ ರಾಣೀಖೇಟದ ವರೆಗೆ ಬಹಳ ಏರಿಯಿದ್ದು ನಡುವೆ ೫। ಮೈಲಿನ ಮೇಲೆ ಬಾಂಸುರಿಚಟ್ಟಿ ಯಿದೆ. ಮಹಾರಾಜರ ಸಲುವಾಗಿ ದ್ವಾರಹಾಟದಲ್ಲಿ ೩-೪ ಬಂಗ್ಲೆಗಳು ತೆರವು ಮಾಡಲ್ಪಟ್ಟಿದ್ದವು. ಇಲ್ಲಿ ಎಲ್ಲ ತರಹದ ಅನುಕೂಲತೆಯಾಯಿತು. ಮಹಾರಾಜರ ಸಂಗಡಿಗರು ಇಲ್ಲಿಂದ ಮುಂದೆ ಮೋಟಾರದಿಂದ ಪ್ರಯಾಣ ಬೆಳೆಸಿದರು. ಬಾಡಿಗೆಯ ಕುದುರೆಗಳನ್ನಿಲ್ಲಿಯೇ ಬಿಟ್ಟರು.

ಇದು ೭೦೦೦ ಫೂಟು ಎತ್ತರದ ಮೇಲಿದೆ. ಇಲ್ಲಿ ಹಿಂದೀ ಯುರೋಪಿಯನ್ ಸೈನ್ಯವಿರುತ್ತದೆ. ಇಲ್ಲಿಯ ಹವೆ ನೀರು ಬಹಳ ಚನ್ನಾಗಿವೆ. ಸುತ್ತಲಿನ ಪರ್ವತವೆಲ್ಲ ಗಗನಚುಂಬಿತ ವೃಕ್ಷಗಳಿಂದ

ರಾಣೀಖೇಟ
೭೦೦೦

ತುಂಬಿದ್ದು, ಇಲ್ಲಿಂದ ಬಹಳ ದೂರದಲ್ಲಿ ಹಿಮಶಿಖರಗಳು ಕಾಣುತ್ತವೆ. ಇಲ್ಲಿಯ ಜನರ ವಸತಿಯು ಸುಮಾರು ೨೦-೨೫ ಸಾವಿರ. ಇಲ್ಲಿಂದ ಕೆಳಕ್ಕೆ ಹೋಗಲು ಮೋಟಾರಿನ ಮಾರ್ಗಗಳಿವೆ.

ಆಲ್ಮೋರಾ, ನೈನಿತಾಳ ಖಾಟಗೋದಾಮಗಳಿಗೆ ಇಲ್ಲಿಂದಲೇ ಮಾರ್ಗಗಳು ಹೋಗಿವೆ. ಇಲ್ಲಿಂದ ೪೮ ಮೈಲಿನ ಮೇಲೆ ಖಾಟಗೋದಾಮ, ೩೭ ಮೈಲಿನ ಮೇಲೆ ಆಲ್ಮೋರಾ ನಗರಗಳಿವೆ. ಖಾಟಗೋದಾಮಿನ ಹಾದಿಯಲ್ಲಿ ೨೮ ಮೈಲಿನ ಮೇಲೆ ನೈನಿತಾಲದ ದಾರಿಯು ಬರುತ್ತಿದ್ದು ೧೦ ಮೈಲು ಮೋಟಾರದಿಂದಲೂ ೪ ಮೈಲು ಕಾಲು ನಡಿಗೆಯಿಂದಲೂ ಮುಂದೆ ಹೋಗಬೇಕಾಗುತ್ತದೆ. ಖಾಟಗೋದಾಮಿನ ಮಾರ್ಗವು ಬಹಳ ಕಠಿಣ. ಕೆಲವು ಕಡೆ ಗುಡ್ಡವು ಕುಸಿಬಿದ್ದು ಒಂದು ಹಳ್ಳಿಯು ಹುಗಿದು ಹೋಗಿತ್ತು. ಈ ಮಾರ್ಗದಲ್ಲಿ ಒಂದು ನದಿಗೆ ನಡುವೆ ಕಂಬಗಳಿಲ್ಲದೆ ಮೇಲಿನ ಬಾರುಗಳ ಆಧಾರದಿಂದಲೇ ಪೂಲನ್ನು ಕಟ್ಟಿದ್ದಾರೆ. ಮೋಟರು ಹೋಗುವಾಗ ಅದು ಸ್ಪ್ರಿಂಗಿನಂತೆ ಅಗಳಾಡುತ್ತದೆ. ಸ್ವಲ್ಪ ತಪ್ಪಿದಲ್ಲಿ ಮೋಟರು ಚೂರು ಚೂರಾಗುವ ಸಂಭವವಿದೆ. ಇಲ್ಲಿ ಪೋಸ್ಟ ತಾರ ಆಫೀಸಗಳಿದ್ದು ವಿದ್ಯುದ್ದೀಪಗಳಿಂದ ನಗರವು ಸುಶೋಭಿತವಾಗಿದೆ.


ಅಲ್ಮೋರಾ (೫೫೦೦ ಫೂಟ)

ಇಲ್ಲಿಂದ ನೈನಿತಾಲದ ಮೇಲಿಂದ ಖಾತಗೋದಾಮವು ೫೮ ಮೈಲಿನ ಮೇಲಿದೆ. ಇದು ಜಿಲ್ಹೆಯ ಮುಖ್ಯ ಸ್ಥಳವು ೨೦-೨೫ ಸಾವಿರ ಜನರು ವಾಸಿಸುತ್ತಾರೆ. ಇಲ್ಲಿಯ ಹವೆ ನೀರು ಉತ್ತಮವಾಗಿದ್ದು ಆರೋಗ್ಯಕ್ಕಾಗಿ ಅನೇಕ ಜನರು ಇಲ್ಲಿ ಬಂದು ವಾಸ ಮಾಡುತ್ತಾರೆ. ಇಲ್ಲಿಂದ ಸುತ್ತಲೂ ನೀತಿಪಾಸ ೧೬೫೭೦ ಫೂಟ, ನೂನಾಪಾಸ ೧೮೦೦೦ ಫೂಟು, ಜುಹಾರಪಾಸ ೧೭೨೭೦ ಫೂಟು ಮತ್ತು ತ್ರಿಶೂಲಪಹಾಡ ಮುಂತಾದ ಅನೇಕ ಹಿಮ ಶಿಖರಗಳಿರುತ್ತವೆ. ಇವುಗಳಲ್ಲಿ ಪೂರ್ವದ್ದು ೨೨೩೪೨ ಫೂಟು ಮಧ್ಯದ್ದು ೨೩೦೯೨ ಫೂಟು, ಪಶ್ಚಿಮದ್ದು ೨೩೩೪೮ ಫೂಟು ಎತ್ತರವಿರುತ್ತವೆ. ಈ ಪರ್ವತಗಳೊಳಗಿಂದ ಶಾರದಾ, ಗಾಗರಾ, ಚವುಲಿ, ಗುಲಕಾ, ಗೌರಿಗಂಗಾ, ರಾಮಗಂಗಾ, ಸೂರ್ಯಮಾಲೀ ಮುಂತಾದ ಅನೇಕ ನದಿಗಳು ಉಗಮವಾಗಿವೆ. ಇವೆಲ್ಲ ಅಲಕನಂದಾ ನದಿಗೆ ಕೂಡುತ್ತವೆ. ಈ ಅಡವಿಯಲ್ಲಿ ಅನೇಕ ಖನಿಜ ಪದಾರ್ಥಗಳು ಸಿಕ್ಕುತ್ತವೆ. ಚಿರ್ಚು ಕರಡಿ, ಆಡಿವೆಳಿಕಳು ಮುಂತಾದ ಅನೇಕ ಪ್ರಾಣಿಗಳುಂಟು. ಚಹಾ


ಕಿತ್ತಳೆ ಹಣ್ಣುಗಳ ಅನೇಕ ತೋಟಗಳಿವೆ. ಇಲ್ಲಿಂದ ತಿಬೇಟಕ್ಕೆ ಒಂದು ಮಾರ್ಗ ಹೋಗಿದೆ. ಕೈಲಾಸ, ಮಾನಸಸರೋವರಗಳಿಗೆ ಹೋಗುವವರನೇಕರು ಈ ಮಾರ್ಗದಿಂದ ಹೋಗುತ್ತಾರೆ. ಭಾಟಿಯಾ ಜನರು ಇಲ್ಲಿಂದ ಚಹಾ, ಅರಿಷಣ, ಜೇನತುಪ್ಪ, ಉಣ್ಣೆಯ ವಸ್ತ್ರ, ತಂಬಾಕು ಮುಂತಾದ ಪದಾರ್ಥಗಳನ್ನು ಹೊರಗೆ ಕಳಿಸುತ್ತಾರೆ. ಮತ್ತು ಹೊರಗಿನಿಂದ ಕುದುರೆ, ಕುರಿ, ರೇಶಿಮೆ, ಸಕ್ಕರೆ, ಮುಂತಾದವುಗಳನ್ನು ತರುತ್ತಾರೆ. ಇದು ತಿಬೇಟದ ಜನರ ಸಂಗಡ ವ್ಯಾಪಾರ ಮಾಡುವ ಮುಖ್ಯಸ್ಥಾನವಾಗಿದೆ. ಇಲ್ಲಿಂದ ೩೮ ಮೈಲಿನ ಮೇಲೆ ನೈನಿತಾಲವಿದೆ.

ನೈನಾದೇವಿಯ ಮಂದಿರವಿಲ್ಲಿದ್ದುದರಿಂದ ಈ ಸ್ಥಾನಕ್ಕೆ ಈ ಹೆಸರು ಬಂದಿದೆ. ಸಂಯುಕ್ತ ಪ್ರಾಂತದಲ್ಲಿ ಹವೆ ಬದಲು ಮಾಡುವ ಸ್ಥಳಗಳಲ್ಲೊಂದಿದು. ಬೇಸಿಗೆಯಲ್ಲಿ ಅನೇಕ ಶ್ರೀಮಂತರೂ ಸರಕಾರೀ ಅಧಿಕಾರಿಗಳೂ ಇಲ್ಲಿಗೆ ಬರುತ್ತಾರೆ. ಈ ಪಟ್ಟಣವು ಗುಡ್ಡದಿಂದ ಸುತ್ತಲ್ಪಟ್ಟಿದ್ದ ಒಂದು ಕೆರೆಯ ಮೇಲಿದೆ. ಇಲ್ಲಿ ಅನೇಕ ಧರ್ಮಶಾಲೆಗಳಿದ್ದು, ನೈನಾದೇವಿಯ ಗುಡಿಯ ಹತ್ತರ ಹಿಂದೂ - ಯುರೋಪಿಯನ್ನರ ಉಪಹಾರಗೃಹ ಭೋಜನಾಲಯಗಳಿವೆ. ನೈನಿತಾಲದಿಂದ ಪಶ್ಚಿಮೋತ್ತರಕ್ಕಿರುವ ಚಿನಾಬೀ ಶಿಖರವು ೮೫೬೮ ಫೂಟು ಎತ್ತರವಿದೆ. ಅಲ್ಲಿನ ಬರ್ಫಿನ ಪರ್ವತದ ಶಿಖರವು ಬಹಳ ಮನೋಹರವಾಗಿದೆ. ಈ ಪರ್ವತದ ಮೇಲೆ ಅನೇಕ ತೋಟಗಳೂ, ಯುರೋಪಿಯನ್ನರ ಬಂಗ್ಲೆಗಳೂ ಇವೆ. ನೈನಿತಾಲದಿಂದ ೫–೬ ಮೈಲು ದೂರದಲ್ಲಿ ಭೀಮತಾಲೂ ಎಂಬ ಒಂದು ಸಣ್ಣ ಕೆರೆಯಿದೆ. ಇದೂ ಅವಶ್ಯವಾಗಿ ನೋಡತಕ್ಕ ಸ್ಥಳವು.

ನೈನಿತಾಲ ೬೪೧೦ ಫೂಟ



ಶ್ರೀಕೇದಾರನಾಥ ದೇವಾಲಯ.



ಗಂಗೋತ್ರಿ ಶಿಖರಗಳು.

ಇದು ಬಹು ಪುರಾತನ ಕಾಲದ ನಗರವು. ಇಲ್ಲಿನ ಕಟ್ಟಡಗಳನ್ನು ನೋಡಿದರೆ ಇದು ಬುದ್ಧನ ಕಾಲದ ನಗರವಿರಬಹುದೆಂಬುದು ಗೊತ್ತಾಗುವುದು. ಮಹಾಬುದ್ಧ ಮಂದಿರ, ಕುಂಭೇಶ್ವರ, ಲಕ್ಷ್ಮೀನಾರಾಯಣನಂಥ ನೂರಾರು ಮಂದಿರಗಳು ಹಳೆ ಅರಮನೆ, ಬುದ್ಧವಿಹಾರಗಳು ಮುಂತಾದ ಕಟ್ಟಡಗಳು ನಗರದ ತುಂಬೆಲ್ಲ ವ್ಯಾಪಿಸಿವೆ. ಈ ಕಟ್ಟಡಗಳಲ್ಲಿಯ ಕಟ್ಟಿಗೆಯಲ್ಲಿಯ ಕೆತ್ತಿಗೆಯ ಕೆಲಸವು ಬಹಳ ಅಂದವಾಗಿದೆ. ಈ ನಗರವು ಕಾಟಮಾಂಡುವಿನಿಂದ ೨॥ ಮೈಲಿನ ಮೇಲಿದೆ.

ಪಾಟಣ

ಪಾಟಣನಗರಕ್ಕೆ ಹೊಂದಿದ ಶಂಖಮೂಲದಲ್ಲಿ ತುಲಸಿ ಮೆಹರ್ಜಿ ಎಂಬವನು ಖಾದೀ ಕಾರ್ಯವನ್ನು ಮಾಡುತ್ತಿರುವನು. ಇವನು ಆಶ್ರಮದಲ್ಲಿಯ ನನ್ನ ಮಿತ್ರನು. ಗಾಂಧಿಜಿಯವರ ಆಶ್ರಮದಲ್ಲಿದ್ದುದಕ್ಕಾಗಿ ನೇಪಾಳ ಸರಕಾರದವರು ಇವನನ್ನು ಮೊದಲು ತಮ್ಮ ಸೀಮೆಯ ಹೊರಗೆ ಹಾಕಿದ್ದರು. ಆದರೆ ಈಗ ಇವರೇ ತಿಂಗಳೊಂದಕ್ಕೆ ೮೫ ರೂ. ಕೊಟ್ಟು ಈ ಪವಿತ್ರ ಕಾರ್ಯಕ್ಕೆ ಸಹಾಯ ಮಾಡುತ್ತಿರುವರು. ಈ ಸಂಘದ ಹೆಸರು 'ಚಂದ್ರ ಕಾಮಧೇನು ಚರಖಾಪ್ರಚಾರಕ ಮಹಾಗುಠ್ಠಿ' (ಸಾರ್ವಜನಿಕ) ಶಂಖಮೂಲ ಎಂದಿದೆ. ಈ ಸಂಘದ ವತಿಯಿಂದ ನೂರಾರು ರಾಟಿಗಳೂ ಅನೇಕ ಮಗ್ಗಗಳೂ ನಡೆಯುತ್ತವೆ. ೨-೩ ಶುದ್ಧ ಖಾದೀ ಅಂಗಡಿಗಳೂ ನಡೆದಿವೆ. ಇದು ಪ್ರಾರಂಭವಾಗಿ ೪-೬ ವರ್ಷ ಆಯಿತು. ೫೦೦-೬೦೦ ರೂ. ಖಾದಿಯ ಖರ್ಚಿದೆ. ಇಲ್ಲಿ ಚರ್ಮವಿಲ್ಲದೆ ತಯಾರಿಸಲ್ಪಟ್ಟ ಶುದ್ಧ ಖಾದಿ ಬೂಟುಗಳು ಸಿಕ್ಕುವುವು.

ಶಂಖಮೂಲ ಖಾದೀವಸ್ತ್ರಾಲಯ

ಇದೂ ಒಂದು ಪುರಾತನ ರಾಜಧಾನಿಯು. ಇದಕ್ಕೆ ಭಾದಗಾಂವ ಎಂದೂ ಕರೆಯುವರು. ಇಲ್ಲಿ ದತ್ತಾತ್ರೇಯ, ಭೈರವನಾಥ, ಹಳೇದರಬಾರ, ಬುದ್ಧಮಂದಿರಗಳು ನೋಡುವಂಥವಿವೆ.

ಭಗತಪೂರ

ನೇಪಾಳದಲ್ಲಿ ಅವರ ಸ್ವಂತ ನಾಣ್ಯಗಳೂ ಪೋಸ್ಟಕಾರ್ಡುಗಳೂ ನಡೆಯುತ್ತವೆ. ಇತ್ತಕಡೆಯ (ಬ್ರಿಟಿಶ) ನಾಣ್ಯಗಳಿಗೆ 'ಕುಂಪನಿ

ಪೈಸಾ' ಎಂದೆನ್ನುತ್ತಾರೆ. ಪಶುಪತಿನಾಥನ ಜಾತ್ರೆಯ ವೇಳೆಗೆ ಮಾತ್ರ ನಮ್ಮ ಕಡೆಯ ನಾಣ್ಯಗಳು ಅತ್ತ ನಡೆಯುತ್ತಿದ್ದು ಅಲ್ಲಿಯವರು ನಮ್ಮ ನಾಣ್ಯಗಳಿಗೆ ಹೆಚ್ಚು ಕ್ರಯ ಕೊಡುತ್ತಾರೆ. ಯಾಕೆಂದರೆ ನಮ್ಮ ನಾಣ್ಯಗಳನ್ನು ಸಂಗ್ರಹಿಸಿಟ್ಟವರಿಗೆ ಎಕ್ಸಚೇಂಜ ಆಫೀಸಿನಲ್ಲಿ ನೇಪಾಳ ದೇಶದ ಹೆಚ್ಚು ಹಣವು ದೊರೆಯುವುದು. ಆದರೆ ಬ್ರಿಟಿಶ್ ನಾಣ್ಯಗಳು ನೇಪಾಳದಲ್ಲಿ ಯಾವಾಗಲೂ ನಡೆಯುವುದಿಲ್ಲ.

ನಾಣ್ಯಗಳು.

ಇದು ಸ್ವತಂತ್ರ ಸಂಸ್ಥಾನವಾಗಿದೆ. ಸಂಸ್ಥಾನದ ಸೈನ್ಯ ವೆಚ್ಚಕ್ಕಾಗಿ ಪ್ರತಿವರ್ಷ ೧೦ ಲಕ್ಷ ರೂಪಾಯಿಗಳು ಬ್ರಿಟಿಶ್ ಸರಕಾರದಿಂದ ದೊರೆಯುತ್ತಿವೆ. ಬ್ರಿಟಿಶರು ಕರೆದಾಗ ಎಲ್ಲ ಸೈನ್ಯವು ಅವರು ಹೇಳಿದ ಸ್ಥಳಕ್ಕೆ ಬರಬೇಕೆಂದು ಕರಾರಿದೆ. ಕಾಟಮಾಂಡುವಿನಲ್ಲಿ ಕೆಲವು ಶಾಲೆ ಕಾಲೇಜುಗಳಿದ್ದರೂ ೧೦೦ ಕ್ಕೆ ೯೭ ಜನರಿಗೆ ಮೇಲ್ತರಗತಿಯ ಶಿಕ್ಷಣವಿಲ್ಲ. ಈ ಶಾಲೆಗಳಲ್ಲಿ ಇತಿಹಾಸ ಭೂಗೋಲಗಳನ್ನು ಕಲಿಸುವದಿಲ್ಲಂತೆ. ಇಲ್ಲಿಯ ಪುಸ್ತಕಾಲಯಗಳಲ್ಲಿ ಈ ಪುಸ್ತಕಗಳೂ ದೊರೆಯುವುದಿಲ್ಲ. ಉದ್ಯೋಗಧಂದೆ, ಕಲಾಕೈಗಾರಿಕೆಯ ಶಾಲೆಗಳೂ ಫ್ಯಾಕ್ಟರಿಗಳೂ ಈ ಸಂಸ್ಥಾನದಲ್ಲಿಲ್ಲವೆಂದೇ ಹೇಳಬೇಕಾಗುವುದು. ಇಲ್ಲಿ ಹೊರಗಿನ ನೂಲಿನಿಂದ ಕೆಲವರು ಬಟ್ಟೆಯನ್ನು ನೇಯುವುದುಂಟು. ಆದರೆ ಜನರಿಗೆ ಬೇಕಾಗುವ ಅರಿವೆಗಳೆಲ್ಲ ಹೊರಗಿನಿಂದಲೇ ಹೆಚ್ಚಾಗಿ ಬರುವುವು. ಕಾಶ್ಮೀರದಲ್ಲಿಯಂತೆ ಉಣ್ಣೆ-ರೇಶಿಮೆ ವಸ್ತ್ರಗಳ ಕಾರಖಾನೆಗಳೊಂದೂ ಇಲ್ಲ. ಸದ್ಯದ ಚಳವಳಿಯ ಬಗ್ಗೆಯಂತೂ ಇಲ್ಲಿಯ ಸರಕಾರದ ಕಟಾಕ್ಷ ಬಹಳ! ಖಾದೀ ಟೊಪ್ಪಿಗೆಗಂತೂ ಅರ್ಧಚಂದ್ರವೇ!! ಗುಭಜು ಮತ್ತು ದೇವಭಜು (ಬುದ್ಧರು ಮತ್ತು ಹಿಂದುಗಳು) ಎಂಬ ಎರಡು ಮುಖ್ಯ ಜಾತಿಗಳಿದ್ದು ಎಲ್ಲರೂ ಮಾಂಸಾಹಾರಿಗಳಾಗಿರುವರು. ಇವರಷ್ಟು ಹೊಲಸು ಜನರನ್ನು ಮತ್ತಾವ ಭಾಗದಲ್ಲಿಯೂ ನಾನು ನೋಡಲಿಲ್ಲ. ಇವರು ಮನೆಯ ಒಳಗೂ ಹೊರಗೂ ಸ್ವಲ್ಪವೂ ಸ್ವಚ್ಛತೆಯನ್ನಿಡಲು ಪ್ರಯತ್ನಿಸುವುದಿಲ್ಲ. ಎಲ್ಲ ಕಡೆಗೂ ಹೊಲಸೇ ಹೊಲಸಿ

ರಾಜ್ಯಪದ್ಧತಿ
ಜನರ ಆಚಾರವಿಚಾರಗಳು

ದ್ದಿತು. ಭೂಮಿಯು ಬೆಳೆಯುಳ್ಳದ್ದು. ಅಕ್ಕಿ. ಗೋಧಿ, ಗೋವಿನ ಜೋಳ, ಮಸಾಲೆಯ ಕಾಳುಗಳು ಮತ್ತು ಸ್ವಲ್ಪ ಹತ್ತಿ ಇಲ್ಲಿ ಬೆಳೆಯುತ್ತವೆ ತಕ್ಕಮಟ್ಟಿಗೆ ಕಾಡುಹಣ್ಣುಗಳೂ ಬೆಳೆಯುವುವು. ನೀರಿನ ಸಮೃದ್ಧಿಮಾತ್ರ ದೇಶದಲ್ಲಿದ್ದಂತೆ ಕಂಡು ಬರಲಿಲ್ಲ. ಪರಪ್ರಾಂತದವರಿಗೆ ಹೆಚ್ಚು ದಿವಸ ಇಲ್ಲಿರಲು ಪರವಾನಿಗೆ ಇಲ್ಲ. ೧೫ ದಿವಸಗಳ ವರೆಗೆ ಮಾತ್ರ ನನಗೆ ಇಲ್ಲಿರಲು ಪರವಾನಿಗೆಯಿದ್ದುದರಿಂದ ಅಷ್ಟರಲ್ಲಿ ಶಕ್ಯವಿದ್ದ ಎಲ್ಲ ವಿಷಯಗಳನ್ನು ಸಂಗ್ರಹಿಸಿ ಬರೆದಿರುತ್ತೇನೆ.

---

## ಹಿಮಾಲಯದೊಳಗಿನ ಉಳಿದ ಕೆಲವು ಹವೆ ಬದಲಾಯಿಸುವ ಸ್ಥಳಗಳು.

೧] **ಅಬೋಟೋಬಾದ** ೪೦೦೦ ಫೂಟು. ಇಲ್ಲಿಗೆ ಹೋಗಬೇಕಾದರೆ ಪೇಶಾವರ ಮಾರ್ಗದಲ್ಲಿ ತಕ್ಷಶಿಲೆಗೆ ಗಾಡಿ ಬದಲಾಯಿಸಿ ಮುಂದೆ ಹ್ಯಾವೇಲಿಯನ್ ಸ್ಟೇಶನದಲ್ಲಿಳಿದು ಮೋಟರು ಮಾರ್ಗವಾಗಿ ಹೋಗಬಹುದು.

೨] **ಡುಂಗಾಗಲ್ಲಿ** ಮತ್ತು **ಚಾಂಗಲಗಲ್ಲಿ** ಇವು ಅಬೋಟೋಬಾದದಿಂದ ಹೋದ ಮಾರ್ಗದಲ್ಲಿವೆ. ಈ ಸ್ಥಳಗಳಿಗೆ ಕುದುರೆಯ ಮೇಲಿಂದ ಹೋಗಬೇಕಾಗುತ್ತದೆ.

೩] **ಡಾಲಹೌಸಿ** ೬೭೪೦ ಫೂಟು. ಪಠಾಣಕೋಟೆ ರೇಲ್ವೆ ಸ್ಟೇಶನಕ್ಕಿಳಿದು ಕುದುರೆಯ ಮೇಲಿಂಡ ಹೋಗಬೇಕಾಗುತ್ತದೆ.

೪] **ಲೋವರಧರ್ಮಶಾಲೆ** ೮೫೦೦ ಫೂ. (ಪಠಾಣಕೋಟೆಯಿಂದ)

೫] **ಪಾಲಂಪೂರ** ೪೦೦೦ ಫೂಟು. ಪಠಾಣಕೋಟೆ ಸ್ಟೇಶನದಿಂದಲೇ ಮಾರ್ಗ ಹೋಗಿದೆ.

೬] **ಮಹಾಸು** ೮೪೦೦ ಫೂಟು. ಸಿಮ್ಲಾದಿಂದ ೫ ಮೈಲಿನ ಮೇಲಿದೆ. ಕುದುರೆಯ ಮೇಲಿಂದ ಹೋಗಬಹುದು.

೭] **ಮಾಶೋಬ್ರಾ** ೭೬೦೦ ಫೂಟು. ಇಲ್ಲಿಗೂ ಸಿಮ್ಲಾದಿಂದ ಮಾರ್ಗಹೋಗಿದೆ. ಇದು ಸಿಮ್ಲಾದಿಂದ ೬ ಮೈಲಿನ ಮೇಲಿದೆ.

೮] **ಡಾಗಶಿ** ೭೧೮೦ ಫೂಟು. ಸಿಮ್ಲಾ ಜಿಲ್ಹೆಯಲ್ಲಿರುವ ಕುಮಾರ ಹಟ್ಟಿ ರೇಲ್ವೆಸ್ಟೇಶನದಿಂದ ಮಾರ್ಗ ಹೋಗಿದೆ.

೯] **ಕಸೌಲಿ** ೬೩೨೨ ಫೂಟು. (ಕಾಲ್ಕಾ ರೇಲ್ವೆಸ್ಟೇಶನದಿಂದ)

೧೦] **ಚಕರಾತಾ** ೭೦೦೦ ಫೂಟು. ಡೆಹರಾಡೂನದಿಂದ ಮೋಟರಿನ ಮಾರ್ಗ ಹೋಗಿದೆ. ಈ ಹಾದಿಯು ಮುಂದೆ ಸಿಮ್ಲಾದ ವರೆಗೂ ಹೋಗಿದೆ. ಇದು ಸೈನ್ಯ ಇರುವ ಸ್ಥಳವು.

೧೧] **ಲ್ಯಾನ್ಸಡೌನ** ೬೦೦೦ ಫೂಟು. (ಕೋಟದ್ವಾರ ರೇಲ್ವೆಸ್ಟೇಶನ)

ಹಿಮಾಲಯದಲ್ಲಿ ಪ್ರಸಿದ್ಧ ಹವೆ ಬದಲಾಯಿಸುವ ಸ್ಥಳಗಳಿವು. ಇವುಗಳನ್ನು ಸಂದರ್ಶಿಸಿ, ಇಲ್ಲಿಯ ವನಸಿರಿಯನ್ನು ನೋಡಿ ಆನಂದ ಪಡಬಹುದು. ಇಲ್ಲಿಗೆ ನನ್ನ ಹಿಮಾಲಯದ ಯಾತ್ರೆಯ ವರ್ಣನೆಯು ಕೊನೆಗೊಂಡಿತು.

ಪ್ರಾರ್ಥನೆ.

ಪ್ರಿಯಬಾಂಧವರೇ, ಹಿಮಾಲಯದಂಥ ಪವಿತ್ರ ಮತ್ತು ಸೃಷ್ಟಿ ಸೌಂದರ್ಯದ ಬೀಡಾದ ಪ್ರದೇಶವು ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಇಂಥ ಸರ್ವವಿಧ ಸಂಪತ್ತಿನಿಂದೊಡಗೂಡಿದ ಹಿಮಾಲಯವನ್ನು ಒಮ್ಮೆಯಾದರೂ ಸಂದರ್ಶಿಸಿ ಇಲ್ಲಿನ ಸೃಷ್ಟಿಸೌಂದರ್ಯದ, ಗಿರಿಶಿಖರಗಳ, ಸಾಧುಸಂತರ ಸಮಾಗಮವನ್ನು ಹೊಂದಿ, ಜನ್ಮ ಸಾರ್ಥಕ ಮಾಡಿಕೊಳ್ಳಬೇಕೆಂದು ಎಲ್ಲರನ್ನೂ ಪ್ರಾರ್ಥಿಸಿ ನನ್ನೀ ಹಿಮಾಲಯದ ಯಾತ್ರೆಯ ವರ್ಣನೆಯನ್ನು ಮುಗಿಸುತ್ತೇನೆ.

**ವಂದೇಮಾತರಂ.**

**ಮುಗಿದುದು.**

ಮುದ್ರಕರು:— ವಿಜಯ ಮುದ್ರಣಾಲಯ ಧಾರವಾಡ.